ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೨೧
ವಿಚಾರ ಸಾಹಿತ್ಯಮಾಲೆ – ೪೨
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಮಾರ್ಗವಿಲ್ಲದ ಮಾರ್ಗ

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ
ಮೂಲ ಸಂಪಾದಕರು
**ಕೆ. ಎಂ. ಮುನ್ಷಿ**
**ಆರ್. ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ. ಕೆ. ಬಿರ್ಲಾ** – ಸದಸ್ಯರು
**ಎಸ್. ಜಿ. ನೇವಾತಿಯ** – ಸದಸ್ಯರು
**ಜಿ. ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್. ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)




# ಮಾರ್ಗವಿಲ್ಲದ ಮಾರ್ಗ

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**
**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**
**–ಋಗ್ವೇದ, I. ೮೯–೧**


ಮೂಲ
**ಸ್ವಾಮಿ ರಾಮದಾಸ್**
ಅನುವಾದ
**ಶ್ರೀಮತಿ ವಸುಧಾ ಮೂರ್ತಿ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Margavillada Marga :** Kannada translation of *Pathless Path* by **Swami Ramdas;** Kannada translation by **Smt Vasudha Murthy;** Editor-in-Chief : **Dr. Pradhan Gurudatta;** Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxii + 36 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxii + ೩೬
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦೦೨೦ ದೂ : ೨೨೩೪೨೭೨೪



**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು - ೫೬೦ ೦೦೧
ದಿನಾಂಕ : ೫-೮-೨೦೦೯
ಸಿಎಂ/ಪಿಎಸ್/೧೪೭/೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು-ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ-ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ-ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ-ಸೂಚನೆ-ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ-ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ-ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝುಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝುಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

## ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು, ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.



ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾ ಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾ ಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ



ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧–೦೯–೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧–೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

### (ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

**(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

**(ಇ) ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ



ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀಮತಿ ವಸುಧಾ ಮೂರ್ತಿ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀಮತಿ ಬಿ. ಸುಧಾ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಮಾರ್ಗವಿಲ್ಲದ ಮಾರ್ಗ' ಎಂಬ ಪುಸ್ತಕ ಖ್ಯಾತ ಲೇಖಕಿ ಶ್ರೀಮತಿ ವಸುಧಾ ಮೂರ್ತಿ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ–೭ **ಕೆ. ಎಂ. ಮುನ್ಷಿ**
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

## ಮೂಲ ಲೇಖಕರ ಪೀಠಿಕೆ

ತಮ್ಮದೊಂದು ಪತ್ರದಲ್ಲಿ ಸದ್ಗುರು ಸ್ವಾಮಿ ರಾಮದಾಸರು ಹೀಗೆ ಹೇಳುತ್ತಾರೆ:– "ನಾನು ಒಬ್ಬರಿಗೆ 'ಮಂತ್ರ'ವನ್ನು ಉಪದೇಶಿಸಿದಾಗ ಅವನು/ಅವಳು ನಿರಂತರವಾಗಿ ಪುನರುಚ್ಚಿಸುತ್ತಿರ ಬೇಕು. ಉಳಿದಂತೆ ಅವನು/ಅವಳು ತಮ್ಮ ಒಳದನಿಯ ನಿರ್ದೇಶನದಂತೆ ಪ್ರಕ್ರಿಯೆಯಲ್ಲಿ ತೊಡಗಬಹುದು. ಏಕೆಂದರೆ ಆ ದನಿ ಗುರುವಿನದ್ದೇ ಆಗಿದ್ದು, ಅವರನ್ನು ನಿರ್ದೇಶಿಸುತ್ತಿರುತ್ತದೆ." 'ದೃಷ್ಟಿ'ಯ (vision) ಅಂಕಣಗಳಲ್ಲಿ ಹಾಗೂ ಕೆಲವು ಕೃತಿಗಳಲ್ಲಿ ಸ್ವಾಮಿ ರಾಮದಾಸ್ ಬರೆದಿರುವುದರಲ್ಲಿ, ಸಾಧಕರಿಗೆ ಎಲ್ಲ ರೀತಿಯ ತಿಳುವಳಿಕೆಯನ್ನು ನೀಡಿರುವರು. ಇಲ್ಲೊಂದಿಷ್ಟು ಅಂಶ, ಅಲ್ಲೊಂದಿಷ್ಟು ಅಂಶಗಳನ್ನು ಹೆಕ್ಕಿಕೊಂಡು ಅದರಂತೆ ನಡೆಯುವುದರಿಂದ, ಸಾಧಕರಿಗೆ ತಮ್ಮ ಹಾದಿಯಲ್ಲಿ ಅದು ನೆರವಾಗುವುದು.

ಇದನ್ನೇ 'ಗುರು–ವಾಕ್ಯ'– ಗುರುವಿನ ನಿರ್ದೇಶನವೆಂದು ತಿಳಿದು ಅದನ್ನು ಸಂಗ್ರಾಹಕನು ತನ್ನ ಸ್ವಂತಕ್ಕೂ ಉಪಯೋಗಿಸಿಕೊಳ್ಳುವುದಲ್ಲದೆ, ಕೈಪಿಡಿಯಲ್ಲಿನ ಮಾರ್ಗದರ್ಶನವನ್ನು ಸಂಗ್ರಹಿಸಿ, ವ್ಯವಸ್ಥಿತವಾಗಿಡುವುದು ಪ್ರಯೋಜನಕರ. ಅದನ್ನು ಇತರೆ ಆಕಾಂಕ್ಷಿಗಳು ಅನುಕೂಲಕರವೆಂದು ತಿಳಿಯಲು ಸಹಾಯಕವೆನಿಸುವುದು. ಆ ಉದ್ದೇಶದಿಂದಲೇ ಸದ್ಗುರುವಿನ ಅಪ್ಪಣೆ ಪಡೆದು ಈ ಕೃತಿಯನ್ನು ಎಲ್ಲ ಜನರಿಗೂ ಪ್ರಯೋಜನವಾಗಲೆಂದು ಪ್ರಕಟಿಸಲಾಗಿದೆ.

ಇಲ್ಲಿನ ಅನೇಕ ಅಂಶಗಳು ಆಧ್ಯಾತ್ಮಿಕ ಬೆಳವಣಿಗೆಯ ಏಣಿಯ ವಿವಿಧ ಮೆಟ್ಟಿಲುಗಳಾಗಿ ಕಾಣುತ್ತವೆ. "ಸಾಧನೆಗೆ ಸೂಚನೆಗಳು" ಮತ್ತು "ಧ್ಯಾನ" ಶೀರ್ಷಿಕೆಯಡಿಯ ವಿಚಾರಗಳು ಜ್ಞಾನ ಪಿಪಾಸುಗಳಿಗೆ ಉಪಯುಕ್ತವಾಗಿವೆ. ಈ ಅಧ್ಯಾತ್ಮ ವಿಚಾರದ ಏಣಿಯನ್ನು ಹಂತಹಂತವಾಗಿ ಏರುತ್ತಿದ್ದಂತೆ, ಜ್ಞಾನದ ನಿಜ ಅನುಭವವನ್ನು ಆಕಾಂಕ್ಷಿಯು ಗಳಿಸುವನಲ್ಲದೆ, ನಿತ್ಯಾನಂದವನ್ನೂ, ಬಂಧಮುಕ್ತತೆಯನ್ನೂ ಪಡೆಯುವನು.

**"–ಗುರುದಾಸ"**



## ಪರಿವಿಡಿ


| | |
|---|---|
| ಮೊದಲ ಮಾತು | v |
| ಶುಭಾಕಾಂಕ್ಷೆ | vi |
| ಪ್ರಾಸ್ತಾವಿಕ ನುಡಿ | viii |
| ಪೀಠಿಕೆ | x |
| ಅರಿಕೆ | xvi |
| ಮೂಲ ಸಂಪಾದಕರ ಪ್ರಸ್ತಾವನೆ | xvii |
| ಮೂಲ ಲೇಖಕರ ಪೀಠಿಕೆ | xviii |
| ೧. ಮಾರ್ಗವಿಲ್ಲದ ಮಾತು | ೧ |
| ೨. ಮಾನವ ಜೀವನದ ಗುರಿ | ೩ |
| ೩. ವಾಸ್ತವಿಕತೆಯತ್ತ ತಿರುಗಿ | ೫ |
| ೪. ಬದಲಾವಣೆ ಒಳಗಿನಿಂದ ಆಗಬೇಕು | ೭ |
| ೫. ಧರ್ಮವು ಅನುಭವಕ್ಕೆ ಸಂಬಂಧಿಸಿದ ವಿಷಯ | ೮ |
| ೬. ಗುರುವಿನ ಸಾನ್ನಿಧ್ಯ ಮತ್ತು ಗುರುಕೃಪೆ | ೧೦ |
| ೭. ದಿವ್ಯನಾಮವೆಂಬ ಏಣಿ | ೧೧ |
| ೮. ಶ್ರದ್ಧೆ ಮತ್ತು ಸಮರ್ಪಣೆ | ೧೪ |
| ೯. ಸಾಧನೆಗೆ ಸೂಚನೆಗಳು | ೧೬ |
| ೧೦. ಧ್ಯಾನ | ೨೦ |
| ೧೧. ಸಮಾಧಿ | ೨೩ |
| ೧೨. ಎತ್ತರ ತಲುಪಿದ ನಂತರ | ೨೫ |
| ೧೩. ವಿಶ್ವದರ್ಶನವಾದ ಮಾನವನ ಗುಣ ವಿಶೇಷಣಗಳು | ೨೬ |
| ೧೪. ಒಳಗಿನ ದನಿ | ೨೭ |
| ೧೫. ಜೀವನ್ಮುಕ್ತ | ೨೮ |
| ೧೬. ಪುನರವಲೋಕನ | ೨೯ |
| ೧೭. ದೇವರ ಅರಿವಿಗೆ ದಾರಿ | ೩೧ |
| ೧೮. ಗೀತೆಯ ಸಂದೇಶ | ೩೫ |

**Blank Page**



# ಮಾರ್ಗವಿಲ್ಲದ ಮಾರ್ಗ

# ೧. ಮಾರ್ಗವಿಲ್ಲದ ಮಾರ್ಗ

ಜಗತ್ತಿನಲ್ಲಿ ವೈವಿಧ್ಯಮಯ ಧರ್ಮ ಪಂಥಗಳು, ಮತಗಳು, ಧಾರ್ಮಿಕ ಸಂಸ್ಥೆಗಳು, ತೊಳಲಾಡುತ್ತಿರುವ ಮಾನವರನ್ನು ಆಧ್ಯಾತ್ಮಿಕ ವಿಮೋಚನೆ ಮತ್ತು ಶಾಂತಿಯತ್ತ ಕರೆದೊಯ್ಯಲು ಸ್ಥಾಪಿತವಾಗಿವೆಯೆಂದು ಭಾವಿಸಲಾಗಿದೆ. ಆತ್ಮವನ್ನು ಪರಿಶುದ್ಧವನ್ನಾಗಿ ಮಾಡಿ ಪಾವಿತ್ರ್ಯತೆಯ ಸಂಪೂರ್ಣತೆಗೆ ತೆಗೆದುಕೊಂಡು ಹೋಗುವುದಕ್ಕೆ ಹಲವಾರು ಮಾರ್ಗಗಳಿವೆ. ಇದರ ಆಕಾಂಕ್ಷಿಗಳು ಇದನ್ನು ಪಡೆಯುವುದರಲ್ಲಿ ತಲ್ಲೀನರಾಗಿದ್ದಾರೆ. ಯಾವುದೋ ಒಂದು ನೀತಿ ಶಿಕ್ಷಣದ ಹಿಡಿತದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆಂಬ ಭಾವನೆ ಬರುವ ಇವರಿಗೆ ಪ್ರಯೋಗದ ನಂತರ ಅವರ ಪ್ರಗತಿ ಸಮರ್ಪಕವಾಗಿಲ್ಲವೆಂದೆನಿಸುತ್ತದೆ. ಅವರ ಹೃದಯಗಳು ಮಲಿನವಾಗಿದ್ದು, ಮನಸ್ಸು ತಳಮಳಗೊಳಿಸುತ್ತವೆ. ಒಂದು ಗಳಿಗೆ ನೆಮ್ಮದಿ ಕಂಡರೂ, ನಂತರ ಹತಾಶ ಭಾವನೆ ಆವರಿಸುತ್ತದೆ. ಇದರಲ್ಲಿ ಕೆಲವರು ಶ್ರದ್ಧೆಯಿಂದ ಅಮರತ್ವ ಮತ್ತು ನೆಮ್ಮದಿ ಹುಡುಕುವ ಹೆಬ್ಬಯಕೆ ಹೊಂದಿರುತ್ತಾರೆ. ಇನ್ನು ಕೆಲವರಿಗೆ ಈ ಬಯಕೆ ಗಟ್ಟಿಯಾಗಿರುವುದಿಲ್ಲ. ಮತ್ತೆ ಕೆಲವರು ಧಾರ್ಮಿಕತೆಯ ಬಾಹ್ಯ ಪ್ರದರ್ಶನ ಮಾಡುತ್ತಾರೆ. ಆದರೆ ಎಲ್ಲರೂ ಸಂಧಿಗ್ಧತೆ ಮತ್ತು ಗಲಿಬಿಲಿಯ ಮನಸ್ಥಿತಿ ಹೊಂದಿರುತ್ತಾರೆ. ಕತ್ತಲಲ್ಲಿ ತಡಕುತ್ತ ಬೆಳಕಿನ ಮತ್ತು ಸ್ವಾತಂತ್ರ್ಯದ ದಾರಿ ಸಿಗುತ್ತದೆ ಎಂದು ಹುಡುಕುತ್ತ ಇರುತ್ತಾರೆ. ತಮ್ಮ ಹುಡುಕಾಟಕ್ಕೆ ಭವಿಷ್ಯದಲ್ಲಿ ಅಂತ್ಯ ಹಾಡಬಹುದೆಂದು ತಮ್ಮನ್ನು ತಾವೇ ಮೋಸಪಡಿಸಿಕೊಳ್ಳುತ್ತಾರೆ.

ಆತ್ಮದ ಬೆಳವಣಿಗೆ ಮತ್ತು ವಿಕಸನಕ್ಕೆ, ಆತ್ಮವು ಎದುರಿಸಿದ ಅನುಭವಗಳು– ಅವುಗಳು ಎಷ್ಟೇ ಕಹಿಯಾಗಿದ್ದರೂ ತುಂಬ ಮುಖ್ಯವಾದವು. ವಿಕಸನದ ಒಂದು ಹಂತವನ್ನಾದರೂ ಆದಷ್ಟು ಶೀಘ್ರವಾಗಿ ಆಧ್ಯಾತ್ಮಿಕ ಹಾದಿಯತ್ತ ತೆರಳಲು, ಕಲ್ಪನೆಯ ಚಕ್ರವ್ಯೂಹದಿಂದ ಹೊರಬಂದರೆ ಒಳ್ಳೆಯದು.

ಸತ್ಯವಾದ ಹಾದಿ ಎನ್ನುವುದು ಯಾರೋ ಮಾಡಿದ ಮಾರ್ಗವಲ್ಲ; ಇದು ಯಾವುದಾದರೂ ಒಂದು ಧಾರ್ಮಿಕ ಪಂಥವನ್ನು ಸೇರಿದರಾಗಲೀ ಅಥವಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಲ್ಲಾಗಲೀ ಇರುವಂಥದ್ದಲ್ಲ. ಆ ಹಾದಿಯನ್ನು, ಹಾದಿ ಎನ್ನುವುದಾದರೆ ಅದು ತುಂಬ ಸರಳವಾದುದು. ಪ್ರೇಮ ಮತ್ತು ಕರುಣಾಭರಿತ ದೇವರನ್ನು ಆಹ್ವಾನಿಸಿ ನಿಮ್ಮನ್ನು ಅವನ ಮಗುವಾಗಿ

ಪರಿವರ್ತಿಸುವಂತೆ ಮಾಡಿಕೊಳ್ಳಿ. ಅವನ ಅನುಗ್ರಹದಿಂದ ನಿಮ್ಮ ಪ್ರತಿಯೊಂದು ಅಂಶವನ್ನೂ ಶುದ್ಧ ಮಾಡಿ, ಚೈತನ್ಯ ನೀಡಿ, ನಿಮ್ಮನ್ನು ಆವರಿಸಿಕೊಳ್ಳಲು ಅನುಮತಿ ಕೊಡಿ. ನಿಮ್ಮ ಸರ್ವಸ್ವವನ್ನೂ ಅವನಿಗೆ ಅರ್ಪಿಸಿ, ನಿಮ್ಮೊಳಗೆ ಮತ್ತು ಹೊರಗೆ ಅವನ ಅಸ್ತಿತ್ವದ ಬಗೆಗೆ ಜಾಗರೂಕರಾಗಿರಿ.

ನೀವು ನಿಜವಾಗಿ ಆಧ್ಯಾತ್ಮಿಕತೆಯನ್ನು ಹಂಬಲಿಸುವುದಾದರೆ ನಿಮ್ಮ ತುಡಿತ ಅವನನ್ನು ಕರೆಯುವಷ್ಟರಮಟ್ಟಿಗೆ ತೀವ್ರವಾಗಿರಬೇಕು. ನೀವು ಆ ಕ್ಷಣ ಭಯಾವೃತ ಜಗತ್ತಿನಿಂದ ಬಿಡಿಸಿಕೊಳ್ಳಬೇಕು. ನಿಮ್ಮ ಆತ್ಮ ತನ್ನ ಪವಿತ್ರ ಸ್ವಭಾವವನ್ನು ತಿಳಿದುಕೊಳ್ಳಲು ಹಂಬಲಿಸಬೇಕು. ಯಾವುದೋ ಒಂದು ಪಂಥದ ನಿಲುವಂಗಿ ಧರಿಸಿ, ನಾನು ಇಂಥವನು ಎಂದು ಕರೆಸಿಕೊಳ್ಳುವುದರಲ್ಲಿ ಯಾವುದೇ ಅರ್ಥವಿಲ್ಲ. ಮುಖವಾಡಗಳು ಕೆಲಸಕ್ಕೆ ಬಾರದವಾಗುತ್ತವೆ. ಆಡಂಬರ ಮತ್ತು ಬೂಟಾಟಿಕೆಗಳು ಆತ್ಮವಂಚನೆ ಯಾಗುತ್ತವೆ. ಅವುಗಳ ಬಿಗಿ ಹಿಡಿತದಿಂದ ಬಿಡಿಸಿಕೊಳ್ಳಿ. ನೀವೇ ರಚಿಸಿಕೊಂಡಿರುವ ಪಂಜರದಿಂದ ಹೊರಬನ್ನಿ. ತಿಳಿಯಾದ ಮನಸ್ಸನ್ನು ಬೆಳೆಸಿಕೊಂಡು ನಿಮ್ಮ ಒಣಪ್ರತಿಷ್ಠೆಯನ್ನು ತೊಲಗಿಸಿ; ನಿಮ್ಮೊಳಗಿನ ಆಂತರಿಕ ಸತ್ಯಕ್ಕೆ ಶರಣಾಗಿ; ನಿಮ್ಮ ದೃಷ್ಟಿ ವಿಶ್ವವ್ಯಾಪಿಯಾಗಲು ನೆರವಾಗಿ. ನಿಮ್ಮ ಹೃದಯ ಎಲ್ಲ ಜೀವಿಗಳನ್ನು ಪ್ರೀತಿಯಿಂದ ಸೆರೆಯಲ್ಲಿ ಬಂಧಿಸಲಿ. ನಿಮ್ಮ ಶರೀರ ಆ ಸರ್ವವ್ಯಾಪಿ ದೈವಿಕ ಶಕ್ತಿಯೊಡನೆ ಕೆಲಸ ಮಾಡಲಿ. ನಿಮ್ಮ ಪ್ರತಿ ಅಣು ಅಣುವೂ ಭಾವಪರವಶತೆಯನ್ನು ಹೊಂದಿ ವಿಶ್ವಶಾಂತಿಗೆ ಸಾಧನವಾಗಲಿ. ಇತರ ಎಲ್ಲ ಮಾತುಗಳೂ ಗೌಣ. ಬೇರೆ ಯಾವ ಪಥವೂ ನಿಮ್ಮನ್ನು ಶಾಂತಿಯೆಡೆಗೆ ಕರೆದೊಯ್ಯುವುದಿಲ್ಲ. ಜಾಗೃತರಾಗಿರಿ ಮತ್ತು ಮೋಸ ಹೋಗದಿರಿ.

ಹೆಸರು, ಕೀರ್ತಿ ಮತ್ತು ಹಣದ ಆಳಾಗಬೇಡಿ. ಎಲ್ಲ ಪ್ರಾಪಂಚಿಕ ವಸ್ತುಗಳೂ ಹೊರಟು ಹೋಗುತ್ತವೆ. ದೇವರನ್ನೇ ನಿಮ್ಮ ಗುರಿಯನ್ನಾಗಿ ಮಾಡಿಕೊಳ್ಳಿ. ನೀವು ಅವನೊಡನೆ ಒಂದಾಗಿದ್ದೀರಿ. ಇದನ್ನು ಅರಿತು ನಿಜವಾದ ಸಂತೋಷ ಮತ್ತು ನೆಮ್ಮದಿ ಪಡೆಯಿರಿ.

* * * *

## ೨. ಮಾನವ ಜೀವನದ ಗುರಿ

ಜೀವನ ಚಿಕ್ಕದು. ಅದನ್ನು ದೇವರಿಗೆ ಅರ್ಪಿಸಿ ಅಮೂಲ್ಯ ಮಾಡಿಕೊಳ್ಳಿ; ಪ್ರತಿದಿನವೂ ಅಂತಿಮಕ್ಕೆ ಹತ್ತಿರವಾಗುತ್ತ, ನಿಮ್ಮದೆಂದುಕೊಂಡಿದ್ದನ್ನೆಲ್ಲ ಬಿಟ್ಟು ಈ ಪ್ರಪಂಚದಿಂದ ಹೊರಹೋಗುತ್ತೀರಿ. ದೇವರ ಸ್ಮರಣೆಯಲ್ಲಿ ತೊಡಗಿರುವ ಜೀವನವೇ ನಿಜವಾದ ಸುಖ, ನೆಮ್ಮದಿಯ ಜೀವನ. ಇಲ್ಲದಿದ್ದರೆ ಅದು ಭಯಂಕರ ಮೃತ್ಯುಕೂಪಕ್ಕೆ ಎಳೆಯುವ ಕಷ್ಟಗಳ ಉದ್ದನೆಯ ಸರಪಳಿಯಾಗುತ್ತದೆ.

ಮನುಷ್ಯ ಜೀವನ ಇರುವುದು ಶಾಶ್ವತ ಪರಮ ಸುಖವನ್ನು ಅನುಭವಿಸುವುದಕ್ಕೆ. ಅದು ಬಿಟ್ಟು ಮನುಷ್ಯ ತನ್ನ ಜೀವನವನ್ನು ಕಷ್ಟ, ಸುಃಖ, ಭಯ, ಆತಂಕ ಮುಂತಾದವುಗಳ ಹಾಸಿಗೆಯನ್ನಾಗಿ ಮಾಡಿಕೊಂಡರೆ, ದೇವರು ನೀಡಿರುವ ಅತ್ಯಮೂಲ್ಯ ಕೊಡುಗೆಯನ್ನು ವ್ಯರ್ಥಮಾಡಿಕೊಳ್ಳುತ್ತಾರೆಂದು ಅರ್ಥ.

**ಮನುಷ್ಯನ ಹಿರಿಮೆ**
**ಗಳಿಸಿದ ಮಾಸಿದ ಪ್ರಶಸ್ತಿಗಳಲ್ಲಿಲ್ಲ**
**ಅಕ್ರಮದ ಮಾರ್ಗಗಳಿಂದ**
**ಗಳಿಸಿದ ಪ್ರಾಪಂಚಿಕ ಸಿರಿವಂತಿಕೆಯಲ್ಲಿಲ್ಲ**
**ಮನುಷ್ಯ ಮನುಷ್ಯನಿಗಿಂತ ಎತ್ತರಕ್ಕೆ**
**ಭವ್ಯತೆಯ ಶಿಖರಕ್ಕೆ ಏರಿ**
**ಮರಣವಿಲ್ಲದ ಪರಮಾನಂದವನ್ನು ಹೊಂದಿ**
**ಚಿರಂತನ ಜೀವನ ಮತ್ತು**
**ಸಂತೋಷ ಪಡೆಯಬಹುದು**

ತನ್ನೊಳಗಿರುವ ಶಾಶ್ವತ ಸಂತೋಷದ ಬುಗ್ಗೆಯನ್ನು ಅನುಭವಿಸುವುದರಿಂದ ಮಾತ್ರ ಮನುಷ್ಯನ ಸುಖದ ಹುಡುಕಾಟ ಕೊನೆಗೊಳ್ಳುತ್ತದೆ.

ಮಾನವ ಜನ್ಮವು ದೇವರ ಶ್ರೇಷ್ಠ ಕೊಡುಗೆ. ಅದನ್ನು ಮಾನಸಿಕ ತುಮುಲಗಳಿಂದ ಅಥವಾ ಕಷ್ಟಗಳಿಂದ ಮೇಲೆತ್ತಿರಿ. ಅದನ್ನು ಕಟ್ಟಿಹಾಕಿರುವ ಬಂಧನಗಳಿಂದ ಮುಕ್ತಿಗೊಳಿಸಿ, ಅದು ಸ್ವಾತಂತ್ರ್ಯವನ್ನು ಅನುಭವಿಸಿ, ಶಾಶ್ವತ ಆನಂದವನ್ನು ಹಾಗೂ ನಿಜವಾದ ಸತ್ಯವನ್ನು ಸೇರುವ ಹಾಗೆ ಮಾಡಿ.

ಆತ್ಮದ ಮೇಲ್ಮುಖ ಓಟವು ಯಾವಾಗಲೂ ನಿಜವಾದ ಸತ್ಯದೊಡನೆ ತಾದಾತ್ಮ್ಯವನ್ನು ಹೊಂದುವುದೇ ಆಗಿರುತ್ತದೆ. ಜೀವನದ ಹೋರಾಟಗಳೆಲ್ಲವೂ ಕೊನೆಗೆ ಆ ಸತ್ಯದ ಅರಿವಿನ ಸಮುದ್ರದಲ್ಲಿ ಲೀನವಾಗುತ್ತದೆ. ಅದೇ ದೇವರು. ಅದು ಎಲ್ಲಿಯವರೆಗೆ ಅಮೃತತ್ವದ ಜಲದಲ್ಲಿ ಹಾಗೂ ಅನಂತವಾದ ಬೆಳಕಿನಲ್ಲಿ ಸೇರುವುದಿಲ್ಲವೋ, ಅಲ್ಲಿಯವರೆಗೆ ಅದಕ್ಕೆ ವಿಶ್ರಾಂತಿ ಇಲ್ಲ, ಸ್ವಾತಂತ್ರ್ಯವಿಲ್ಲ ಮತ್ತು ಶಾಂತಿ ಇಲ್ಲ.

* * * *

## ೩. ವಾಸ್ತವಿಕತೆಯತ್ತ ತಿರುಗಿ

ಈ ನಶ್ವರ ಜೀವನದ ಎಲ್ಲ ವಸ್ತುಗಳೂ ಪರಿವರ್ತನೆ ಮತ್ತು ವಿಸರ್ಜನೆಗೆ ವಸ್ತುಗಳಾಗಿವೆ. ದೇವರೊಬ್ಬನೇ ಸತ್ಯ; ನಾವೆಲ್ಲರೂ ಅವನನ್ನು ಸೇರುವುದೇ ನಮ್ಮ ಆಕಾಂಕ್ಷೆ.

ಜೀವನದ ಹೊರಗಿನ ಸನ್ನಿವೇಶದಲ್ಲಿ ಶಾಂತಿ ಮತ್ತು ಸ್ವಾತಂತ್ರ್ಯವನ್ನು ಹುಡುಕಬೇಡಿ. ಏಕೆಂದರೆ ನಿಮ್ಮಲ್ಲಿರುವ ಆತ್ಮದಲ್ಲೇ ಮನಸ್ಸಿನ ಸ್ವಾತಂತ್ರ್ಯ ಅಡಗಿದೆ. ಜೀವನದ ಏಳು–ಬೀಳುಗಳು ನಿಮ್ಮನ್ನು ಭಗವಂತನೆಡೆಗೆ ಕೊಂಡೊಯ್ಯಲಿ. ಇದರಿಂದ ನೀವು ಹೊರಗಿನ ಸಂಕಷ್ಟಗಳಿಂದ ಪಾರಾಗುತ್ತೀರಿ. ದೃಢತೆ ಮತ್ತು ನಂಬಿಕೆಯಿಂದ ಭಗವಂತನ ಸ್ಮರಣೆ ಮಾಡಿ. ನೀವು ಕಚೇರಿಯಲ್ಲಿರಲಿ, ರಸ್ತೆಯಲ್ಲಿರಲಿ, ಅಡಿಗೆ ಮನೆಯಲ್ಲಿರಲಿ ಅಥವಾ ಸ್ನಾನದ ಮನೆಯಲ್ಲಿರಲಿ ನಿರಂತರವಾಗಿ ಭಗವಂತನ ಸ್ಮರಣೆ ಮಾಡಿ. ಇದರಲ್ಲೇ ನೀವು ಪಾರಾಗುವ ಹಾದಿ ಇದೆ. ಇದನ್ನು ತಿಳಿದು ಭಗವಂತನ ನಾಮಸ್ಮರಣೆಯಲ್ಲಿದ್ದು ಅವನಿಗೆ ಶರಣಾಗಿರಿ.

"ಭಗವಂತನು ಜೀವಂತ ಸತ್ಯ. ಮನುಷ್ಯನು ಸಾಧಾರಣವಾಗಿ ತೊಡಗಿಸಿ ಕೊಂಡಿರುವ ನಶ್ವರವಾದ ಆಸಕ್ತಿಗಳಿಗಿಂತ ಅವನು ಹೆಚ್ಚು ಸತ್ಯ. ಮನುಷ್ಯನು ಐಹಿಕವಾದ ಹಾಗೂ ಲೌಕಿಕವಾದ ಆಸೆಗಳಿಂದ ತಾನೇ ಬಂಧಿತನಾಗಿದ್ದರೆ ಶಾಶ್ವತ ಸತ್ಯದಿಂದ ದೂರ ಉಳಿಯುತ್ತಾನೆ ಹಾಗೂ ಅವನ ಚಿರಂತನ ಅಸ್ತಿತ್ವವನ್ನೇ ಅಳಿಸಿ ಹಾಕುತ್ತದೆ. ಮತ್ತು ಶಾಶ್ವತವಾದ ಸಂತೋಷದಿಂದ ವಂಚಿತನಾಗುತ್ತಾನೆ."

ಆದುದರಿಂದ ಓ ನನ್ನ ಪವಿತ್ರವಾದ ಆತ್ಮವೇ, ನಿನ್ನ ಜೀವನವನ್ನು ಭಗವಂತನ ಜೊತೆ ಸೇರಿಸಿಕೊಳ್ಳದಿದ್ದರೆ, ನಿನ್ನ ಜೀವನವೇ ವಿಫಲವಾಗುತ್ತದೆ.

ಮನುಷ್ಯನ ಜೀವಿತ ಕಾಲ ಬಹಳ ಅಲ್ಪ ಮತ್ತು ಆ ಕಾಲದಲ್ಲಿ ಅನುಭವಿಸುವ ಸಂತೋಷ ನಶ್ವರ. ಈ ನೆರಳನ್ನು ಹಿಂಬಾಲಿಸುತ್ತ ನೀವು ಕತ್ತಲೆಯೆಡೆಗೆ ನಡೆಯುತ್ತಿದ್ದೀರಿ ಮತ್ತು ನಿಮ್ಮೊಳಗಿರುವ ಚಿರನೂತನ ಪರಮಶ್ರೇಷ್ಠ ಸತ್ಯವನ್ನು ಮರೆಯುತ್ತಿದ್ದೀರಿ.

ಮನುಷ್ಯನು ಅಸುಖಿ. ಏಕೆಂದರೆ ಅವನು ತನ್ನ ಹೃದಯಕ್ಕೆ ಬೇಕಾದ ಸುಖವನ್ನು ಪಡೆಯಲು ಯತ್ನಿಸುತ್ತಾನೆ. ಇದರಿಂದ ಸುಖವನ್ನು ಕೊಡಲಾಗದ ಹೊರಗಿನ ವಸ್ತುಗಳಿಗೆ ಶರಣಾಗುತ್ತಾನೆ.

ನಿಮ್ಮ ಸಂತೋಷ ಅಥವಾ ದುಃಖಾವಸ್ಥೆಗಳು ನಿಮ್ಮ ಮನಸ್ಸಿನ ಭಾವುಕತೆಯೇ ಹೊರತು ಹೊರಗಿನ ಸಂದರ್ಭ ಅಥವಾ ಸ್ಥಿತಿಗಳಲ್ಲ. ಯಾವಾಗ ನಿಮ್ಮ ಮನಸ್ಸು ಒಂದು ವಸ್ತುವಿನಿಂದ ಮತ್ತೊಂದು ವಸ್ತುವಿಗೆ ಹೋಗಲು ಮುಂದೂಡುತ್ತದೆಯೋ ಸುಖ ಮತ್ತು ಸಂತೋಷಕ್ಕಾಗಿ ಹಂಬಲಿಸುತ್ತದೆಯೋ, ಆಗ ಅದು ಅಶಾಂತಿ ಮತ್ತು ದುಃಖವನ್ನು ಅನುಭವಿಸುತ್ತದೆ. ಒಂದು ವಸ್ತುವನ್ನು ಪಡೆದಾಗ ಕಾತರತೆ ಮತ್ತು ಚಿಂತೆ ಇರುತ್ತದೆ. ಆದರೆ ಅದನ್ನು ಕಳೆದುಕೊಂಡಾಗ ದುಃಖ ಮತ್ತು ನೋವು ಉಂಟಾಗುತ್ತದೆ. ನೀವು ಪಡೆದುಕೊಳ್ಳುವ ಅಲ್ಪಸಂತೋಷ, ಕತ್ತಲ ಕೂಪದಲ್ಲಿ ಹೊಳೆಯುವ ಒಂದು ಪುಟ್ಟ ಮಿಣುಕು ದೀಪದಂತಿರುತ್ತದೆ. ಆ ದೀಪ ಒಂದು ಕ್ಷಣದಲ್ಲಿ ನಂದಿ ಹೋಗಿ ನಿಮ್ಮನ್ನು ಗಾಢಾಂಧಕಾರಕ್ಕೆ ತಳ್ಳುತ್ತದೆ. ಆದುದರಿಂದ ನೀವು ತಿಳಿಯಬೇಕಾದುದು ಏನೆಂದರೆ ನೀವು ಬಯಸುವ ವಸ್ತುಗಳು ನಶ್ವರ ಮತ್ತು ನಾಶವಾಗಬಲ್ಲವು, ಅಂತಹವುಗಳಿಂದ ಶಾಶ್ವತವಾದ ಶಾಂತಿ ಸಿಗಲು ಹೇಗೆ ಸಾಧ್ಯ? ಆದುದರಿಂದ ಯಾವಾಗ ಮನಸ್ಸು ಅಶಾಶ್ವತವಾದ ಹಾಗೂ ಬದಲಾಗುವ ವಸ್ತುಗಳ ಮಿಶ್ರಣದಲ್ಲಿ ಸಂಚರಿಸುತ್ತದೆಯೋ, ಆಗ ಅದಕ್ಕೇ ದುಃಖ ಮತ್ತು ಅಶಾಂತಿ ವಿನಃ ಬೇರೆ ಏನೂ ದೊರಕುವುದಿಲ್ಲ. ಆದುದರಿಂದ ನಿಮ್ಮ ದೃಷ್ಟಿಯನ್ನು ಶಾಶ್ವತ ಸುಖ ಸಂತೋಷಕ್ಕೆ ಕಾರಣವಾಗಿರುವ ನಿಮ್ಮೊಳಗಿರುವ ಈಶ್ವರನ ಕಡೆಗೆ ಕೇಂದ್ರೀಕರಿಸಿ.

ಒಂದು ವಿಷಯವನ್ನು ಖಚಿತವಾಗಿ ತಿಳಿದುಕೊಳ್ಳಬೇಕು. ಅದೇನೆಂದರೆ ಶಾಂತಿ ಎನ್ನುವುದು ನಮ್ಮ ಹೃದಯ ಮತ್ತು ಆತ್ಮದ ಹೆಬ್ಬಯಕೆ. ಅದರಲ್ಲಿ ಉದ್ಭವಿಸುವ ತುಮುಲಗೊಂಡ ದುಃಖ ಮತ್ತು ಅಸಂತೃಪ್ತಿ ತರುವ ಆಸೆಗಳನ್ನು ಅಳಿಸಿ ಹಾಕುವುದು. ಶಾಂತಿ... ಶಾಂತಿ... ಶಾಂತಿ ಇದೊಂದೇ ಹೃದಯದ ಕೂಗು. ಏನೂ ಬಯಸದ ಶಾಂತಿ– ಸ್ವಯಂ ಪ್ರೇರಿತ ಶಾಂತಿ– ಚಿರಂತನ ಶಾಂತಿ. ಈ ಶಾಶ್ವತ ಶಾಂತಿಯು ನಿಮ್ಮ ವ್ಯಕ್ತಿತ್ವ– ಇದನ್ನು ಪಡೆಯುವುದಲ್ಲ; ಇದನ್ನು ಅನುಭವಿಸಬೇಕು. ಏಕೆಂದರೆ ಅದು ನಿಮ್ಮಲ್ಲಿಯೇ ಇದೆ.

ಪ್ರಪಂಚದ ನಶ್ವರವಾದ ವಸ್ತುಗಳು ಶಾಂತಿಯನ್ನು ಕರುಣಿಸಲು ಅಸಮರ್ಥವಾಗಿವೆ. ನಿಮಗೆ ಶಾಂತಿ ಬೇಕೆಂದರೆ ನಿಮ್ಮ ಮನಸ್ಸಿನ ಕೊನೆಯಿಲ್ಲದ ಮತ್ತು ಬದಲಾಗದ ವಾಸ್ತವಿಕತೆಯತ್ತ ಗಮನ ಹರಿಸಬೇಕು. ಸತತವಾದ ಧ್ಯಾನ ಮತ್ತು ಚಿಂತನೆಯಿಂದ ನಿಮ್ಮ ಯೋಚನೆಯನ್ನು ವಾಸ್ತವಿಕತೆಯತ್ತ ಹರಿಸಿ, ಭಗವಂತನ ಸಾನ್ನಿಧ್ಯದಲ್ಲಿ ನಿಶ್ಚಲವಾಗಿಸಿ ಬದಲಾಗದ ಶಾಂತಿಯನ್ನು ಪಡೆದುಕೊಳ್ಳಬೇಕು.

ನೀವು ಉಪ್ಪರಿಗೆಯಲ್ಲಿರಲಿ ಅಥವಾ ಅಲೆದಾಡುವ ದಿಗಂಬರ ಯಾಚಕ ನಾಗಿರಲಿ, ಮನಸ್ಸಿನ ಎಲ್ಲ ಆಸೆ–ಆಕಾಂಕ್ಷೆಗಳನ್ನು ತೊಡೆದು ಹಾಕಿ ಚಿರಂತನವಾದ ಶಾಂತಿಯನ್ನು ಅನುಭವಿಸಿ.

* * * *



## ೪. ಬದಲಾವಣೆ ಒಳಗಿನಿಂದ ಆಗಬೇಕು

ಹೊರಗಿನ ಪರಿತ್ಯಾಗ ಒಂದೇ ನಿಜವಾದ ತ್ಯಾಗವಲ್ಲ ಮತ್ತು ಅದರ ಅವಶ್ಯಕತೆಯೂ ಇಲ್ಲ.

ಒಬ್ಬ ಮನುಷ್ಯ ತನ್ನ ಬಾಹ್ಯ ಜೀವನ ಮತ್ತು ಸುತ್ತಲಿನ ಪರಿಸರದಲ್ಲಿ ಆಂತರಿಕ ಶಾಂತಿಯನ್ನು ಪಡೆಯಲು ಪ್ರಯತ್ನ ಮಾಡಬಹುದು. ಭೂಮಿಯ ಉದ್ದಗಲಕ್ಕೂ ನೆಮ್ಮದಿ ಪಡೆಯುವ ವಾತಾವರಣಕ್ಕೋಸ್ಕರ ಅಲೆದಾಡಿದ ಸಾವಿರಾರು ಜನರ ಅನುಭವಗಳನ್ನು ಗಮನಿಸಿದರೆ, ಅವರಿಗೆಲ್ಲ ನೆಮ್ಮದಿ ದೊರಕಿಲ್ಲ. ಏಕೆಂದರೆ ಬದಲಾವಣೆ ಆಂತರಿಕವಾಗಿರಬೇಕು, ಅಂದರೆ ಆಂತರಿಕ ನೋಟದಲ್ಲಿ.

'ನಿನ್ನಲ್ಲೇ ಹುಡುಕು; ನಿನ್ನನ್ನು ತಿಳಿದುಕೊ.' ಈ ಗುಟ್ಟು ಹಾಗೂ ಉದಾತ್ತ ಸಂಕೇತಗಳು ಋಷಿಗಳ ಕಾಲದಿಂದ ನಮ್ಮೆಡೆಗೆ ತೇಲಿ ಬಂದಿವೆ. ಮೋಕ್ಷ ಎನ್ನುವುದು ಯಾವುದೇ ವಸ್ತುಸ್ಥಿತಿ ಅಥವಾ ಸನ್ನಿವೇಶದ ಅಧೀನವಲ್ಲ; ಅಜ್ಞಾನವನ್ನು ಅಳಿಸಿ ದಿವ್ಯಜ್ಞಾನ ಪ್ರಾಪ್ತಿಯಾದಾಗ ಅಮರತ್ವದ ಮೂಲಕ ಸಿಗುವುದೇ ಮೋಕ್ಷ. ಇದು ನಮ್ಮ ಆಂತರಿಕ ದೃಷ್ಟಿಯ ಬದಲಾವಣೆಯಷ್ಟೇ. ಇದರಲ್ಲಿ ಬದಲಾವಣೆ ಆಗದಿದ್ದರೆ ಒಬ್ಬ ಮನುಷ್ಯ ಅಜ್ಞಾನಿಯಾಗಿದ್ದ ದಿನಗಳಲ್ಲಿ ಯಾವ ಸ್ಥಿತಿಯಲ್ಲಿದ್ದನೋ, ಆ ದಿವ್ಯಜ್ಞಾನ ಬಂದ ಮೇಲೂ ಹಾಗೆಯೇ ಇರಬಹುದು.

ಸನ್ಯಾಸತ್ವವನ್ನು ನಿಮ್ಮ ಮೇಲೆ ಯಾರೂ ಹೇರಲು ಸಾಧ್ಯವಿಲ್ಲ. ಸನ್ಯಾಸವೆಂದರೆ ತಲೆ ಬೋಳಿಸಿಕೊಂಡು ಕಾವಿ ನಿಲುವಂಗಿ ತೊಡುವುದಲ್ಲ. ಅದು ಕ್ಷಣಿಕ ವಸ್ತುಗಳನ್ನು ಮನಸ್ಸಿನಿಂದ ದೂರ ಮಾಡುವ ಆಂತರಿಕ ಸ್ಥಿತಿಯನ್ನು ಸೂಚಿಸುತ್ತದೆ. ಮನಸ್ಸಿನ ವಿರಕ್ತಿಯಿಲ್ಲದೆ ಕೇವಲ ಬಟ್ಟೆ ಬದಲಾಯಿಸುವ ಅಥವಾ ಬಾಹ್ಯರೂಪಗಳನ್ನು ಬದಲಾಯಿಸುವುದರಿಂದ ಯಾವ ಉಪಯೋಗವೂ ಆಗುವುದಿಲ್ಲ. ಆಸೆ ಎಂಬ ಬೀಜದಿಂದ ಮೊಳಕೆಯೊಡೆದ ದುಷ್ಟ ಬೇರು, ಅಜ್ಞಾನದಲ್ಲಿ ಮುಳುಗುವುದಕ್ಕೆ ಕಾರಣ. ಆದುದರಿಂದ ಆಸೆ ಮತ್ತು ಮಮಕಾರಗಳ ನಿರ್ಮೂಲನವೇ ಮುಕ್ತಿ.

* * * *

## ೫. ಧರ್ಮವು ಅನುಭವಕ್ಕೆ ಸಂಬಂಧಿಸಿದ ವಿಷಯ

ನೀವು ಮತ್ತು ವಿಶ್ವದ ಅಸ್ತಿತ್ವದ ಹಾದಿ ಹೊರಗಿಲ್ಲ. ಅದನ್ನು ತಿಳಿಯಲು ನೀವು ನಿಮ್ಮೊಳಗೇ ಹೋಗಬೇಕು. ನಿಮ್ಮ ಇಂದ್ರಿಯ, ಜ್ಞಾನ, ಮನಸ್ಸು, ಮತ್ತು ಬುದ್ಧಿಶಕ್ತಿಯನ್ನು ಮೀರಿ ಹೋಗಬೇಕು. ನಿಮ್ಮ ಎಲ್ಲ ಕಲ್ಪನೆ ಮತ್ತು ಆದರ್ಶಗಳಿಗೆ ಅಡ್ಡ ಬಂದು ಎಲ್ಲ ಪರಿಧಿ, ನಿಬಂಧನೆ ಮತ್ತು ಇಷ್ಟಗಳನ್ನು ಮೀರಿ ಮೇಲೇರಿದಾಗ ಮಾತ್ರ ನಿಮ್ಮ ಚಿರಂತನ ಮೂಲ ಹಾಗೂ ಅದರ ದಿವ್ಯ ದೃಷ್ಟಿ ನಿಮ್ಮದಾಗುತ್ತದೆ.

ಧರ್ಮ ಒಂದು ಅನುಭವ. ಕೇವಲ ಇಗರ್ಜಿಯ ಸದಸ್ಯನಾದರೆ ಅಥವಾ ಯಾವುದಾದರೂ ಪಂಥಕ್ಕೆ ಸೇರಿಕೊಳ್ಳುವುದರಿಂದ, ಯಾವುದೇ ವ್ಯಕ್ತಿಗೂ ಧರ್ಮದ ಅನುಭವ ಉಂಟಾಗುವುದಿಲ್ಲ. ಕೇವಲ ಸನಾತನ ಗ್ರಂಥಗಳು ಅಥವಾ ಪವಿತ್ರ ಗ್ರಂಥಗಳನ್ನು ಓದುವುದರಿಂದ ಈ ಅನುಭವ ಲಭ್ಯವಾಗುವುದಿಲ್ಲ. ಕೆಲವು ಧಾರ್ಮಿಕ ಪದ್ಧತಿಗಳನ್ನು ಅನುಸರಿಸುವುದರಿಂದ ಹಾಗೂ ಪ್ರಾರ್ಥನೆ ಮಾಡುವುದರಿಂದಲೂ ಒಬ್ಬ ವ್ಯಕ್ತಿಗೆ ಇದರ ಅನುಭವ ಉಂಟಾಗುವುದಿಲ್ಲ. ಒಬ್ಬ ವ್ಯಕ್ತಿಯ ಸ್ವಂತ ಪರಿಶ್ರಮ ಮತ್ತು ಸತತ ಪ್ರಯತ್ನಗಳಿಂದ ಮಾತ್ರ ಆಧ್ಯಾತ್ಮಿಕ ಅರಿವು ಉಂಟಾಗುತ್ತದೆ. ನೈಜ ಧರ್ಮವನ್ನು ಪರಿಪಾಲಿಸುವ ಮನುಷ್ಯನು ತನ್ನ ವಿಮೋಚನೆಗಾಗಿ ಮತ್ತು ನೆಮ್ಮದಿಗಾಗಿ ತನ್ನ ಆಂತರಿಕ ಪರಿಶ್ರಮದ ಬಗೆಗೆ ಯೋಚಿಸುತ್ತಲೇ ಇರುತ್ತಾನೆ.

ನಿಷ್ಠೆ ಮತ್ತು ನಿಶ್ಚಲ ಪಟ್ಟು ಹಿಡಿದು ಪರಿಶ್ರಮ ಮಾಡಿದಾಗ ಮಾತ್ರ ದೇವರ ಅರಿವು ಹಂಬಲಿಸುವವನಿಗೆ ಉಂಟಾಗುತ್ತದೆ. ಎಲ್ಲಿಯವರೆಗೆ ಮನುಷ್ಯ ತನ್ನ ಇಂದ್ರಿಯ ಸುಖಗಳನ್ನು ಅರಿಸಿಕೊಂಡು ಹೋಗುತ್ತಾನೆಯೋ, ಅಲ್ಲಿಯವರೆಗೆ ಅವನ ಪಥದಲ್ಲಿ ಪ್ರಗತಿ ನಿಧಾನವಾಗಿದ್ದು, ಅಸಮರ್ಪಕವಾಗಿರುತ್ತದೆ. ಆದುದರಿಂದ ತನ್ನ ಪ್ರಯತ್ನದಲ್ಲಿ ಸ್ಥೈರ್ಯವನ್ನು ಹೊಂದಿದ್ದು ಉದ್ದೇಶದಲ್ಲಿ ಖಚಿತತೆಯನ್ನು ರೂಢಿಸಿಕೊಳ್ಳಬೇಕು. ಮನದಲ್ಲಿರುವ ಎಲ್ಲ ಕಲ್ಮಶಗಳನ್ನು ತೊಡೆದು ಹಾಕಲು ಪ್ರಯತ್ನಗಳನ್ನು ಮಾಡಬೇಕು. ಅಮರತ್ವದ ರಾಜ್ಯಕ್ಕೆ ಸಾಧಕನಿಗೆ ನಿರ್ಮಲ ಮತ್ತು ಕೇಂದ್ರೀಕೃತವಾದ ಬುದ್ಧಿ ಇದ್ದರೆ ಮಾತ್ರ ಪ್ರವೇಶ ಸಾಧ್ಯ.

ತುಡಿಯುತ್ತಿರುವ ಮತ್ತು ಅಲೆಯುತ್ತಿರುವ ಮನಸ್ಸನ್ನು ಸರಿಯಾದ ಚಿಂತನೆ ಮತ್ತು ಧ್ಯಾನದಿಂದ ನಿಯಂತ್ರಣದಲ್ಲಿಟ್ಟು ಕೊಂಡು ಮನಸ್ಸನ್ನು ಹೊರಗಿನಿಂದ



ಒಳಕ್ಕೆ ಎಳೆದುಕೊಳ್ಳುವುದೇ ಸರಿಯಾದ ಮಾರ್ಗ. ಮನಸ್ಸು ಸರಿಯಾದ ಮಾರ್ಗದಲ್ಲಿ ನೆಲೆಗೊಂಡನಂತರ, ಅದರ ಅನಿರ್ಬಂಧಿತ ನೈತಿಕ ಶಕ್ತಿಗೆ ಕಡಿವಾಣ ಹಾಕಬೇಕು. ನಿಷ್ಠೆ, ಸತತ ಪರಿಶ್ರಮಗಳೇ ಸತ್ಯಕ್ಕಾಗಿ ಹಂಬಲಿಸುವವನ ಗುಣಗಳು. ಆಧ್ಯಾತ್ಮಿಕ ಪ್ರಗತಿಗೆ ನಿರುತ್ಸಾಹ, ಸೋಮಾರಿತನ ಮತ್ತು ಎಚ್ಚರಗೇಡಿತನಗಳು ಶತ್ರುಗಳು. ಅರಿವು, ಜಾಗೃತಿ ಮತ್ತು ಪರಿಶ್ರಮಗಳು ಸಾಧಕನ ನಿಜವಾದ ಲಕ್ಷಣಗಳು.

* * * *

## ೬. ಗುರುವಿನ ಸಾನ್ನಿಧ್ಯ ಮತ್ತು ಗುರುಕೃಪೆ

ಗುರುಗಳೆಂದು ಸ್ವೀಕರಿಸಿದ ಸಂತರ ಕೃಪೆ ಆಧ್ಯಾತ್ಮಿಕ ಆಕಾಂಕ್ಷಿಗೆ ಅತ್ಯವಶ್ಯಕ. ಗುರುಗಳ ಅಚ್ಚುಮೆಚ್ಚಿನ ಶಿಷ್ಯನಾಗಿರುವುದು ಗುರುವಿನ ಅನುಗ್ರಹ ಪಡೆಯಲು ಬಲು ಮುಖ್ಯವಾದುದು. ಗುರುಗಳು ನೀಡಿದ ಬೋಧನೆಯನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಗುರುವನ್ನು ಮೆಚ್ಚಿಸುವುದೇ ಒಬ್ಬ ನಿಜವಾದ ಆಕಾಂಕ್ಷಿಯ ಲಕ್ಷಣ.

ಒಬ್ಬ ಸಂತನ ಸಾನ್ನಿಧ್ಯದಿಂದ ಸಾವಿರಾರು ಜನರು ಸಂಶಯ, ದುಃಖ ಮತ್ತು ಮರಣದಿಂದ ಪಾರಾಗಿದ್ದಾರೆ. ಗುರುವು ಅಜ್ಞಾನಿಗಳ ಹೃದಯದಲ್ಲಿ ಅವರ ಆಂತರಿಕ ಪಾವಿತ್ರ್ಯತೆಯ ಬಗೆಗೆ ಜಾಗೃತಿ ಮೂಡಿಸಿ ಪ್ರಭಾವವನ್ನು ಬೀರುತ್ತಾನೆ. ಅವನ ಸಾನ್ನಿಧ್ಯದಿಂದ ಜನಗಳ ಮನಸ್ಸಿನ ಕೀಳು ಆಸೆಗಳು ನಾಶವಾಗಿ ಹೋಗುತ್ತವೆ.

ಸಂತರ ಸಮಾಜವೇ ಜನಗಳ ಹೃದಯದಲ್ಲಿ ದೇವರ ಬಗೆಗೆ ಜಾಗೃತಿ ಮೂಡಿಸಲು ಒಂದು ಪ್ರಭಾವಶಾಲಿ ಮಾರ್ಗ. ಆಕಾಂಕ್ಷಿಯು ಅತ್ಯಂತ ವಿನಯದಿಂದ ಗುರುವನ್ನು ಸಮೀಪಿಸಿ ಅವರ ಪ್ರಭಾವವನ್ನು ಸ್ವೀಕರಿಸಬೇಕು. ಸಂತರು ಯಾವಾಗಲೂ ಕರುಣಾಮಯಿಗಳು ಮತ್ತು ಕೃಪಾಳುಗಳಾಗಿರುತ್ತಾರೆ. ಅವರು ಎಲ್ಲೆಡೆಯಲ್ಲಿಯೂ ಪ್ರೀತಿ, ನೆಮ್ಮದಿ ಮತ್ತು ಸಂತೋಷಗಳನ್ನು ಹರಡುತ್ತಾರೆ. ಆದುದರಿಂದಲೇ ಅವರನ್ನು ಭೂಮಿಯ ಮೇಲಿನ ದೇವರ ಅಂಶ ಎಂದು ಪರಿಗಣಿಸಲಾಗುತ್ತದೆ.

ಸಾಧುಸಂತರ ಸಾನ್ನಿಧ್ಯ ಮನಸ್ಸನ್ನು ಅವರ ಕಡೆಗೆ ಸೆಳೆಯುತ್ತದೆ. ತಕ್ಷಣವೇ ತನ್ನ ಕಲ್ಮಶಗಳನ್ನು ಹೊರಹಾಕಿ ಪ್ರಸನ್ನತೆಯನ್ನು ಮನಸ್ಸು ಪಡೆಯುತ್ತದೆ. ಇದರಿಂದಾಗಿ ಆಕಾಂಕ್ಷಿಗೆ ಒಂದು ಹೊಸ ಬೆಳಕು ಕಾಣಿಸುತ್ತದೆ ಮತ್ತು ಅದರಿಂದ ಸಂತೋಷ ಉಂಟಾಗುತ್ತದೆ. ಇದರಿಂದ ಕಾಲ ಮತ್ತು ಸ್ಥಳಗಳ ಮಿತಿಯನ್ನು ದಾಟಿ ಅವನು ಅನುಭೂತಿಯನ್ನು ಪಡೆಯುತ್ತಾನೆ.

ದೇವರನ್ನು ಅರಿತ ಮಾನವನು ತಾನೇ ಮನುಷ್ಯರೂಪದಲ್ಲಿರುವ ದೇವರಾಗಿ ಪರಿಗಣಿತನಾಗುತ್ತಾನೆ. ಯಾವ ಮನುಷ್ಯನು ವಿಶ್ವಚೇತನದ ಶಕ್ತಿಯನ್ನು ಅರಿಯುತ್ತಾನೆಯೋ ಅಂತಹವನಿಗೆ ಅಜ್ಞಾನದ ಬಾಧೆ ಉಂಟಾಗುವುದಿಲ್ಲ.

* * * *



## ೭. ದಿವ್ಯ ನಾಮವೆಂಬ ಏಣಿ

ಬ್ರಹ್ಮನ್ ಎಂಬ ಹೆಸರನ್ನು ತೆಗೆದುಕೊಂಡು, ಅದನ್ನೇ ಏಣಿಯನ್ನಾಗಿ ಬಳಸಿ ಉತ್ತುಂಗ ಶಿಖರಕ್ಕೆ ಏರಿ ಪರಮಾತ್ಮನಲ್ಲಿ ಶಾಶ್ವತವಾಗಿ ಲೀನವಾಗಬಹುದು.

ದಿವ್ಯನಾಮವೆಂಬ ದೋಣಿಯು ಮನುಷ್ಯನನ್ನು ಜೀವನದ ಸುಳಿಯಿಂದ ಪಾರುಮಾಡಿ ಮೋಕ್ಷಕ್ಕೆ ಕೊಂಡೊಯ್ಯುತ್ತದೆ. ದೇವರ ನಾಮವೇ ಮನುಷ್ಯನನ್ನು ಪವಿತ್ರನನ್ನಾಗಿ ಪರಿವರ್ತಿಸುತ್ತದೆ. ಜಗತ್ತಿನಲ್ಲಿ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಕೆಡಕುಗಳಿಂದ ಉಂಟಾಗುವ ವಿಪತ್ತುಗಳಿಗೆ ಭಗವಂತನ ದಿವ್ಯನಾಮವೇ ಶ್ರೇಷ್ಠ ಔಷಧಿ. ಮನುಷ್ಯನು ಈ ನಾಮದೊಂದಿಗೆ ಹೆಜ್ಜೆ ಹಾಕಿದರೆ, ಅಜ್ಞಾನ ಗುಣಗಳು ತಾವೇ ತಾವಾಗಿ ನಾಶವಾಗಿ, ಅವನಿಗೆ ಜ್ಞಾನದ ಅರಿವು ಉಂಟಾಗುತ್ತದೆ.

ಆ ದಿವ್ಯನಾಮ, ಮನಸ್ಸಿನಲ್ಲಿರುವ ಅಹಂ ಮತ್ತು ಮೋಹಗಳಿಂದ ಮುಕ್ತ ಮಾಡಿ ಇಡೀ ಅಂತರಂಗಕ್ಕೆ ಬೆಳಕು ಮತ್ತು ಸಂತೋಷ ಹರಡುತ್ತದೆ.

ದಿವ್ಯನಾಮವನ್ನು ಜಪಿಸುತ್ತಲೇ ಇರಿ– ಇದರಿಂದ ಅದರ ಸಂಗೀತ ನಿಮ್ಮನ್ನು ಪುಳಕಗೊಳಿಸಿ, ಪ್ರಕಾಶಗೊಳಿಸಿ, ಔನ್ನತ್ಯಕ್ಕೇರಿಸಿ, ಇಡೀ ಜೀವನವನ್ನು ಮಧುರ ಗೊಳಿಸುತ್ತದೆ. ಈ ನಾಮ ಅನಿಯಂತ್ರಿತ ಆಸೆಗಳನ್ನು ನಿಗ್ರಹಿಸಿ, ದುಷ್ಟ ಆಲೋಚನೆಗಳನ್ನು ನಿಯಂತ್ರಿಸಿ, ಬುದ್ಧಿಶಕ್ತಿಯನ್ನು ಪ್ರಕಾಶಿಸುತ್ತದೆ. ಭಕ್ತನು ಮನಸ್ಸಿನ ಏಕಾಗ್ರತೆ ಹೊಂದಲು ಸಾಮರ್ಥ್ಯ ಗಳಿಸಿ, ಮನಸ್ಸನ್ನು ಆಧ್ಯಾತ್ಮಕ್ಕೆ ಸೆಳೆದು ಬಾಹ್ಯ ವಾಸ್ತವಿಕತೆಯೆಡೆ ಸಂಪೂರ್ಣ ಲೀನಗೊಳಿಸುತ್ತದೆ. ಇದು ಮತ್ತೆ ಭಕ್ತನನ್ನು ಆತ್ಮ ಸಮರ್ಪಣೆಯ ಶ್ರೇಷ್ಠ ಲಕ್ಷ್ಯಕ್ಕೆ ಕೊಂಡೊಯ್ಯುತ್ತದೆ. ಆ ದಿವ್ಯ ನಾಮ ನಿಮ್ಮ ಆತ್ಮದ ಕಾರಂಜಿಯನ್ನು ಭೇದಿಸಿ ನಿಮ್ಮ ಅಸ್ತಿತ್ವಕ್ಕೆ ಚಿರಂತನ ಬೆಳಕು, ಜ್ಞಾನ, ನೆಮ್ಮದಿ ಮತ್ತು ಸಂತೋಷ ನೀಡುತ್ತದೆ.

ಮನಸ್ಸನ್ನು ಅವನ ನಾಮದಲ್ಲಿ ಲೀನವಾಗುವಂತೆ ಮಾಡುವುದು ಏಕಾಗ್ರತೆ ಪಡೆಯುವ ಸುಲಭ ಮಾರ್ಗ. ಅವನ ನಾಮದ ಶಬ್ದವೇ ದೇವನ ಪ್ರತೀಕ. ನಿರಂತರ ಅಭ್ಯಾಸದಿಂದ, ಹೊರಗಿನ ಪುನರುಕ್ತಿ ಮನಸ್ಸಿನಲ್ಲಿ ದಿವ್ಯನಾಮವಾಗಿ ಮಾಂತ್ರಿಕವಾಗಿ ಕಾರ್ಯಪ್ರವೃತ್ತವಾಗುತ್ತದೆ. ಆಗ ದಿವ್ಯನಾಮ ಮನಸ್ಸಿಗೆ ಬಂದ ಕೂಡಲೇ ನೀವು ಏಕಾಗ್ರತೆ ಪಡೆಯುವಿರಿ. ಸಾಧನೆಯಿಂದ ಮನಸ್ಸಿನ ಅಸ್ಥಿರತೆಗೆ ಕಡಿವಾಣ ಬೀಳುತ್ತದೆ.

ಓ! ದಿವ್ಯ ನಾಮ! ಅದೆಷ್ಟು ಸುಂದರ. ಕತ್ತಲಿರುವಲ್ಲಿ ಬೆಳಕು ನೀಡುತ್ತದೆ; ದುಃಖಾವಸ್ಥೆಯಿರುವಲ್ಲಿ ಸುಖ ನೀಡುತ್ತದೆ; ಅತೃಪ್ತಿಯಿರುವೆಡೆ ತೃಪ್ತಿ ನೀಡುತ್ತದೆ; ನೋವಿರುವಲ್ಲಿ ಪರಮ ಸುಖ ನೀಡುತ್ತದೆ; ಗೊಂದಲ ಇರುವೆಡೆ ಶಿಸ್ತು ನೀಡುತ್ತದೆ; ನರಕವಿರುವೆಡೆ ಸ್ವರ್ಗ ನೀಡುತ್ತದೆ; ಮಾಯೆ ಇರುವೆಡೆ ದೇವರು ಕಾಣಬರುತ್ತಾನೆ. ಯಾರು ಅವನ ದಿವ್ಯನಾಮಕ್ಕೆ ಶರಣು ಹೋಗುತ್ತಾರೆಯೋ ಅವರಿಗೆ ನೋವು ದುಃಖ ಕಷ್ಟ ಯಾವುದೂ ಬಾಧಿಸಲಾರದು. ಅತೀವ ನೆಮ್ಮದಿಯಿಂದ ಜೀವನ ಪರ್ಯಂತ ಸುಖವಾಗಿರುತ್ತಾರೆ.

ಎಲ್ಲಾ ಪರಿಸ್ಥಿತಿಯಲ್ಲಿಯೂ ಅವನ ನಾಮವನ್ನು ಗಟ್ಟಿಯಾಗಿ ಹಿಡಿದುಕೊಳ್ಳಿ. ಇದು ಒಂದು ಹಲಗೆಯಂತೆ, ತನ್ನನ್ನು ಹಿಡಿದಿರುವವರನ್ನು ಎಂದೂ ಮುಳುಗಿಸುವುದಿಲ್ಲ. ನಾಮವೊಂದೇ ದೇವರು, ಗುರುವೇ ಎಲ್ಲವು.

ಅವನ ನಾಮ ನಮ್ಮ ತುಟಿಯ ಮೇಲಿರುವವರೆಗೂ ನಾವು ಯಾವುದಕ್ಕೂ ಹೆದರಬೇಕಾಗಿಲ್ಲ. ಹೆಸರು ತುಂಬಾ ಸರಳ. ನಿಮ್ಮ ದೈವದತ್ತ ಅಸ್ತಿತ್ವದ ಅರಿವೇ ನಿಮಗಿಲ್ಲದ ಅಜ್ಞಾನದ ಎಳೆಯನ್ನು ಬಿಡಿಸುತ್ತದೆ. ನಿಶ್ಚಲವಾದ, ಸೋಲಿಲ್ಲದ ಗುರಿಗಾಗಿ ಅದು ಕಾರ್ಯ ಪ್ರವೃತ್ತವಾಗುತ್ತದೆ. ಸಂಪೂರ್ಣ ಆತ್ಮ ಸಮರ್ಪಣೆಗೆ ದಿವ್ಯ ನಾಮವೇ ಒಂದು ಸಾಧನ. ನಾಮದ ಪುನರುಕ್ತಿಯ ಆರಂಭದಲ್ಲಿಯೇ ನೀವು ಶಾಶ್ವತ ಅಮೃತವನ್ನು ಸವಿಯುವಿರಿ. ಮುಂದೆ ಹೋದಂತೆ, ನಿಮ್ಮ ಸುಖ ವೃದ್ಧಿಸುತ್ತದೆ ಮತ್ತು ಈ ಸುಖ ಭಾವೋದ್ರೇಕಕ್ಕೆ ತಿರುಗಿದಾಗಿ, ಅದು ನಿಮ್ಮ ದೇಹ ಕಲ್ಪನೆಯನ್ನು ದಾಟಿಸಿ ನಿಮ್ಮೊಳಗಿನ ದಿವ್ಯತೆಗೆ ನಿಮ್ಮನ್ನು ಜಾಗೃತಗೊಳಿಸುತ್ತದೆ. ಬೆಳಕಿದ್ದಾಗ ಕತ್ತಲು ಮಾಯವಾಗುವಂತೆ ನಿಮ್ಮ ವಿಶಿಷ್ಟತೆ ಮಾಯವಾಗುತ್ತದೆ. ಈ ಹಂತದಲ್ಲಿ ಸಾಧಕ ಸಿದ್ಧನಾಗುತ್ತಾನೆ. ಅಂದರೆ ಹಂಬಲಿಸುವವ ದಿವ್ಯ ಪರಿಪೂರ್ಣತೆ ಪಡೆಯುತ್ತಾನೆ.

ದಿವ್ಯನಾಮ ನಿಮ್ಮನ್ನು ನಿಮ್ಮ ಆತ್ಮದಲ್ಲಿ ಲೀನಗೊಳಿಸುತ್ತದೆ ಮತ್ತು ಧ್ಯಾನ ಮಾಂತ್ರಿಕವಾಗುತ್ತದೆ– ಅಂದರೆ ನೀವು ನಿಶ್ಶಬ್ದವಾಗಿ ಕುಳಿತಾಗ ನಿಮ್ಮ ಆತ್ಮದ ಪರವಶತೆಯಲ್ಲಿ ಕಳೆದುಹೋಗುತ್ತೀರಿ. ಮನಸ್ಸನ್ನು ಸತ್ಯದಲ್ಲಿ ಕೇಂದ್ರೀಕರಿಸುವಲ್ಲಿ ಸಾಧಕ ದಿವ್ಯನಾಮದ ಉಪಾಸಕನಿಗಿಂತ ಹೆಚ್ಚು ಹೋರಾಡಬೇಕಾಗುತ್ತದೆ. ಅವನು ಆನಂದದಿಂದ ಪ್ರಾರಂಭ ಮಾಡಿ, ಆನಂದದ ಹಾದಿಯಲ್ಲಿ ನಡೆಯುತ್ತಾನೆ ಮತ್ತು ಆನಂದವೆಂಬ ಗುರಿಯನ್ನು ತಲುಪಿ ಅಂತಿಮವಾಗಿ ತಾನೇ ಆನಂದದಲ್ಲಿ ಲೀನವಾಗಿ ಬಿಡುತ್ತಾನೆ. ಇದು ದಿವ್ಯ ನಾಮ ಕರುಣಿಸುವ ಪರಿಪೂರ್ಣತೆ, ವಿಸ್ತಾರವಾದ ಪೂರ್ಣತೆ ಮತ್ತು ದೈವತ್ವದ ಉನ್ನತ ಅನುಭವ.

ಶ್ರೇಷ್ಠತಮ ತತ್ವದ ಧ್ಯೋತಕವೇ ಪದಗಳ ಸಂಯೋಜನೆ ಅಥವಾ ಮಂತ್ರ. ಇದರ ಉಚ್ಚಾರದಿಂದ ಮನಸ್ಸಿನ ಮೇಲೆ ಮತ್ತು ದೇಹದ ಮೇಲೆ ಅದ್ಭುತ ಪರಿಣಾಮ ಬೀರುವಂತೆ ಇದನ್ನು ಛಂದೋಬದ್ಧವಾಗಿ ರಚಿಸಲಾಗಿದೆ. ಮಂತ್ರದ ನಾದದಿಂದ ಮಾನಸಿಕ ಸಮತೋಲನ ಮತ್ತು ದೈಹಿಕ ಸಾಮರಸ್ಯ ಉಂಟಾಗುತ್ತದೆ. ಇದು ಇಡೀ ಮಾನವ ದೇಹವನ್ನು ದೈವತ್ವದ ನಿತ್ಯ ನಿರಂತರ ಸಂಗೀತಕ್ಕೆ ಸ್ವರ ಕೂಡಿಸುತ್ತದೆ. ಮನಸ್ಸಿನ ಜ್ವರವನ್ನು ಶಮನಗೊಳಿಸುತ್ತದೆ. ಈ ಸಮಭಾವ ಸುಪ್ತವಾಗಿರುವ ದೈವತ್ವದ ಪ್ರಜ್ಞೆಯನ್ನು ಎಬ್ಬಿಸಿದಾಗ, ಆತ್ಮವು ಎಲ್ಲೆಡೆ ವ್ಯಾಪಿಸಿರುವ ವಾಸ್ತವಿಕತೆಯನ್ನು ಸಂಧಿಸುತ್ತದೆ. ಮಂತ್ರಗಳ ಒಂದು ಮಹತ್ತರ ಪ್ರಯೋಜನವೆಂದರೆ ಇದು ಬೇರೆ ವಿಧಾನಗಳಿಗಿಂತ ಆತ್ಮತೃಪ್ತಿ ಮತ್ತು ಸ್ವಾತಂತ್ರ್ಯವನ್ನು ಬೇಗ ದೊರಕಿಸಿ ಕೊಡುತ್ತದೆ. ನಿಜವಾಗಿ ಯಾರ ತುಟಿಗಳ ಮೇಲೆ ಮಂತ್ರಗಳಿರುತ್ತವೆಯೋ, ಅವರು ಅಪರಿಮಿತ ಶಕ್ತಿ, ಬುದ್ಧಿ, ಪ್ರೇಮ ಮತ್ತು ದೈವದೃಷ್ಟಿ ಹೊಂದುತ್ತಾರೆ.



* * * *

# ೮. ಶ್ರದ್ಧೆ ಮತ್ತು ಸಮರ್ಪಣೆ

ಶ್ರದ್ಧೆ ಎಂದರೇನು? ದೇವರ ಚಿತ್ತಕ್ಕೆ ಪ್ರಶ್ನೆ ಮಾಡದೆ ಸಮರ್ಪಣೆ ಮಾಡಿಕೊಳ್ಳುವುದೇ ಶ್ರದ್ಧೆ.

ಏನೇನು ನಡೆಯುತ್ತದೆಯೋ ಅವೆಲ್ಲವೂ ದೇವರ ಚಿತ್ತದಂತೆ. ದೇವರನ್ನು ಶ್ರೇಷ್ಠ, ಒಳ್ಳೆಯ ಮತ್ತು ದಯಾಪರ ಎಂದು ಬಣ್ಣಿಸಲಾಗಿದೆ. ಎಲ್ಲ ವಸ್ತುವಿಗೂ ಅವನೊಬ್ಬನೇ ವಾರಸುದಾರ. ಎಲ್ಲ ಸಂದರ್ಭಗಳು, ಬದಲಾವಣೆಗಳು, ಚಲನೆಗಳು ಆರಂಭವಾಗುವುದು ಸದ್ಗುಣವುಳ್ಳ, ಕರುಣೆಯುಳ್ಳ, ಮಮತಾಮಯಿ ಹೃದಯದಿಂದಾದ್ದರಿಂದ ಗೊಣಗಾಡುವುದಕ್ಕೆ, ತಪ್ಪು ಕಂಡು ಹಿಡಿಯುವುದಕ್ಕೆ, ದುಃಖ ಪಡುವುದಕ್ಕೆ ಆತಂಕ ಪಟ್ಟುಕೊಳ್ಳುವುದಕ್ಕೆ ಮತ್ತು ಹೆದರಿಕೊಳ್ಳುವುದಕ್ಕೆ ಏನೂ ಇಲ್ಲ. ಎಲ್ಲದಕ್ಕೂ ಅವನೇ ಕಾರಣಕರ್ತ. ಅವನು ಸಾಮರಸ್ಯ ಮತ್ತು ಆನಂದಕ್ಕಾಗಿ ಸದಾ ಕೆಲಸ ಮಾಡುತ್ತಾನೆ. ಆದ್ದರಿಂದ ಎಲ್ಲಾ ವಸ್ತುಗಳ ಹೃದಯದಲ್ಲೂ ಅವನಿದ್ದಾನೆ ಮತ್ತು ಕಾರ್ಯತತ್ಪರನಾಗಿದ್ದಾನೆ. ಈ ಶ್ರದ್ಧೆ ನಮ್ಮದಾದರೆ ದೇವರು ಸದಾ ನಮ್ಮ ಜೊತೆಗಿರುತ್ತಾನೆ ಮತ್ತು ನಾವು ಎಲ್ಲಾ ಕಾರ್ಯಗಳನ್ನು ಅವನ ಪ್ರೋತ್ಸಾಹದಿಂದ ಮಾಡುತ್ತೇವೆ. ಅವನು ನಮ್ಮೊಳಗಿದ್ದು ನಮ್ಮ ಸುತ್ತಲೂ ಇದ್ದಾನೆ. ನಮ್ಮ ಸಂಶಯ, ಭಯಗಳು ಈಗ ಮಾಯವಾಗುತ್ತವೆ ಮತ್ತು ನಾವು ಸ್ವಾತಂತ್ರ್ಯದ ಅವಸ್ಥೆಯನ್ನು ತಲುಪುತ್ತೇವೆ. ಇದೇ ನೆಮ್ಮದಿ ಮತ್ತು ಪರಮಸುಖ.

**"ಇಗೋ! ರಾಮನ ಚಿತ್ತವೇ ಪರಮಶ್ರೇಷ್ಠ**
**ಆ ಚಿತ್ತಕ್ಕೆ ಬಾಗಿ ನಮಿಸು**
**ಏನೇ ಬರಲಿ– ರಾಮನೇ ಮಾಡುವುದು ಎಲ್ಲವನ್ನೂ,**
**ಒಳ್ಳೆಯದಕ್ಕೇ ಎಲ್ಲವನ್ನೂ ಮಾಡುವನು.**
**ಏಕೆಂದರೆ ರಾಮ ದಯಾಮೂರ್ತಿ, ರಾಮನೇ ಮಮತೆ...**
**ರಾಮ ಯಾವಾಗಲೂ ಒಳ್ಳೆಯದನ್ನೇ ಬಯಸುತ್ತಾನೆ."**

ಮಾನಸಿಕ ಸಮತೋಲನ ಕಾಪಾಡಿಕೊಳ್ಳಲು ಇಡೀ ವಿಶ್ವದ ವಿಧಿಯನ್ನು ನಿಯಂತ್ರಿಸಿ ದಾರಿ ತೋರುವ ದೇವರ ಚಿತ್ತ ಮತ್ತು ಕಾರ್ಯಗಳಿಗೆ ಶಾಂತವಾಗಿ ಸಮರ್ಪಿಸಿಕೊಳ್ಳುವುದೇ ಪರಮ ಪರಿಹಾರ.



ಯಾವುದೇ ಬಾಹ್ಯ ಒತ್ತಡಗಳಿಂದ ಸಮತೋಲನವನ್ನು ಕಳೆದುಕೊಳ್ಳಬೇಡಿ. ಗಾಳಿಯ ಮೋಡಗಳಂತೆ ಅವು ಬಂದು ಹೋಗುತ್ತವೆ. ಬದಲಾಗದ ಚಿರಂತನ ಅಸ್ತಿತ್ವವೆಂಬ ಕಲ್ಲುಬಂಡೆಯ ಮೇಲೆ ಅಚಲವಾಗಿ ನಿಂತುಕೊಳ್ಳಿ.

ಮನಸ್ಸು ದೇವರಲ್ಲಿ ದನಿಗೂಡಿದರೆ, ಬಾಹ್ಯ ವಿದ್ಯಮಾನಗಳು ನಮ್ಮ ಮೇಲೆ ಪರಿಣಾಮ ಬೀರುವುದಿಲ್ಲ. ಒಂದೇ ತರಹದ ಕಷ್ಟದ ಪರಿಸ್ಥಿತಿಗಳು, ನಿರಾಶೆ ಮತ್ತು ಸಂಘರ್ಷಣೆ ಎಲ್ಲರಿಗೂ ಬರುತ್ತದೆ. ಪ್ರಮಾಣದಲ್ಲಿ ಸ್ವಲ್ಪ ಹೆಚ್ಚು ಸ್ವಲ್ಪ ಕಡಿಮೆ ಇರುತ್ತದಷ್ಟೇ. ಯಾರು ಎಲ್ಲಾ ಪರಿಸ್ಥಿತಿಗಳಲ್ಲಿಯೂ ಸಮಾಧಾನವಾಗಿ ಇರುತ್ತಾರೋ ಅವರು ಶ್ರೇಷ್ಠರು. ಮನಸ್ಸನ್ನು ದೈವತ್ವದಲ್ಲಿ ನೆಲೆಸಿ ಎಲ್ಲವುದೂ ಅವನಿಗೇ ಅರ್ಪಣೆ ಎನ್ನುವವರಿಗೆ ಮಾತ್ರ ಈ ಪ್ರಾಪ್ತಿ ಸಾಧ್ಯ.

ಹೇಗೆ ಒಂದು ಆಕಾರವಿಲ್ಲದ ಕಲ್ಲು ಉಳಿಯ ಏಟಿನಿಂದ ಸುಂದರ ರೂಪ ಪಡೆದು ಭಕ್ತಿಗೆ ಪಾತ್ರವಾಗುತ್ತದೆಯೋ, ಹಾಗೆಯೇ ವಕ್ರ ಹಾಗೂ ಸಾಮರಸ್ಯವಿಲ್ಲದ ಜೀವನವೂ ಒಂದು ದೊಡ್ಡ ಬದಲಾವಣೆ ಆಗುವುದಕ್ಕೆ ಮುನ್ನ, ಅಜ್ಞಾನದ ಜೀವನ ನಲಿವಿಗೆ ಪರಿವರ್ತಿತಗೊಳ್ಳುವುದಕ್ಕೆ ಮುನ್ನ, ಆರಾಧಿಸಿ, ಪೂಜಿಸುವಂತೆ ಮಾಡುವುದಕ್ಕೆ ಮುನ್ನ ಸಾವಿರಾರು ಕಷ್ಟ ಕಾರ್ಪಣ್ಯಗಳನ್ನು ತಡೆಯಬೇಕಾಗುತ್ತದೆ.

ಹಳೆಯದನ್ನು ಮೆಲುಕು ಹಾಕದಿರಿ. ಹಿಂದೆ ಆಗಿದ್ದೆಲ್ಲಾ ಒಳ್ಳೆಯದಕ್ಕೇ. ಆದ್ದರಿಂದ ಅದರ ಬಗ್ಗೆ ಚಿಂತನೆ ಬೇಡ. ಭವಿಷ್ಯದ ಬಗ್ಗೆ ಯೋಚನೆ ಅಥವಾ ಚಿಂತೆ ಬೇಡ. ಏನಾಗಬೇಕಾಗಿದೆಯೋ ಅದು ನಡೆದೇ ತೀರುತ್ತದೆ. ಎಲ್ಲಾ ಪರಿಸ್ಥಿತಿಯಲ್ಲಿಯೂ ಸಮಾಧಾನ ಮತ್ತು ತಾಳ್ಮೆಯಿಂದಿರಿ. ಯಾವ ಚಿಂತೆ, ವ್ಯಾಕುಲತೆಯೂ ವಿಧಿಯಂತೆ ನಡೆಯುವುದನ್ನು ಬದಲಾಯಿಸುವುದಕ್ಕಾಗುವುದಿಲ್ಲ. ಈ ವರ್ತಮಾನದಲ್ಲಿ ರಾಮನನ್ನೇ ಧ್ಯಾನಿಸಿ ಎಲ್ಲಾ ಕೆಲಸ ಅವನಿಗೆ ಅರ್ಪಣೆ ಎಂದೇ ಮಾಡಿ.

* * * *

## ೯. ಸಾಧನೆಗೆ ಸೂಚನೆಗಳು

ದಯಾಮಯ ಮತ್ತು ಕರುಣೆಯುಳ್ಳ ದೇವರನ್ನು ನಿಮ್ಮನ್ನು ಅವನ ಅನುಗ್ರಹದ ಮತ್ತು ದೇದೀಪ್ಯಮಾನ ಮಗುವಿನಂತೆ ಮಾಡಲು ಪ್ರಾರ್ಥಿಸಿರಿ. ಅವನ ಕೃಪಾಕಟಾಕ್ಷದಿಂದ ನಿಮ್ಮ ಇಡೀ ಅಂತರಂಗವನ್ನು ಶುದ್ಧಗೊಳಿಸಲು ಅನುಮತಿ ನೀಡಿ. ಎಲ್ಲವನ್ನೂ ಅವನಿಗೆ ಸಮರ್ಪಣೆ ಮಾಡಿ ಅವನ ಇರುವಿಕೆ ನಿಮ್ಮೊಳಗೆ ಮತ್ತು ಹೊರಗೆ ಇರುವಂತೆ ನಡೆದುಕೊಳ್ಳಿ.

ಎಲ್ಲ ಸಾಧಕರಿಗೂ ಧ್ಯಾನ ಮತ್ತು ದೇವರನ್ನು ಎಲ್ಲ ಸಮಯದಲ್ಲಿಯೂ ನೆನಪಿಸಿಕೊಳ್ಳುವುದು ಅಗತ್ಯ– ದೇವರಿಗಾಗಿ ಹಸಿವು ಮತ್ತು ಬಾಯಾರಿಕೆಯನ್ನು ಹುಟ್ಟಿಸಿಕೊಳ್ಳಿ. ಆ ಹಸಿವು ಬೇಕೆಂದು ಹಂಬಲಿಸಿರಿ. ತೀವ್ರತರವಲ್ಲದ ಆಸೆಯಿಂದ ಏನೂ ಸಿಗುವುದಿಲ್ಲ. ನಿಮಗೆ ಆ ತೀವ್ರ ಹಸಿವನ್ನು ಕರುಣಿಸುವಂತೆ ದೇವರನ್ನು ಪ್ರಾರ್ಥಿಸಿ. ಸಾಧನೆ ಮಾಡಿದರೆ, ಆ ಹಸಿವು ಬರುತ್ತದೆ. ಸಮತೋಲನದಿಂದಿದ್ದು ಆಗಾಗ್ಗೆ ಮಾಡಿದರಾಯಿತು ಎನ್ನುವುದು ಬೇಡ. ಸಾಧನೆಯನ್ನು ಪ್ರತಿನಿತ್ಯ ಹೆಚ್ಚು ತೀವ್ರತೆಯಿಂದ ಮಾಡಿ.

ಸಾಧನೆಯ ಅವಧಿಯಲ್ಲಿ ಸಿದ್ಧಿಯ ಬಗ್ಗೆ ಯೋಚಿಸಬೇಡಿ. ಮೊದಲು ದೇವರನ್ನು ಗ್ರಹಿಸಿ, ಮತ್ತೆಲ್ಲಾ ನಿಮಗೆ ಮಾಂತ್ರಿಕವಾಗಿ ಬರುತ್ತದೆ. ಸಾಧನೆಯನ್ನು ನಿಯಮಿತವಾಗಿ ಮಾಡಿದರೆ ಎಲ್ಲ ಸಂಶಯಗಳೂ ದೂರಾಗುತ್ತವೆ.

ಆಧ್ಯಾತ್ಮಿಕ ಆಕಾಂಕ್ಷಿಗೆ ಹಾದಿ ಸುಗಮವಲ್ಲ. ಆದರೆ ನಿಶ್ಚಲನಾಗಿ ನಡೆಯುವವನಿಗೆ ಮಾತ್ರ ಗುರಿ ತಲುಪಲು ಸಾಧ್ಯ.

ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಬೇಡದ ಆಲೋಚನೆಗಳಿಂದ ದೂರವಿಡಲು ನಿಮ್ಮ ಜೀವನದಲ್ಲಿ ಶಿಸ್ತನ್ನು ಪಾಲಿಸಬೇಕು. ಸೋಮಾರಿತನದ ಮತ್ತು ಚುರುಕಿಲ್ಲದ ಬದುಕಿನಿಂದ ನೀವು ಪ್ರಭಾವಿತರಾಗಬೇಡಿ. ಆಕಾಂಕ್ಷಿಗೆ ತನ್ನ ಹಾದಿಯಲ್ಲಿ ಸಾಗುವುದಕ್ಕೆ ಅಡ್ಡ ಬರುವ ಸೋಮಾರಿತನವೆಂಬ ಶತ್ರುವಿಗಿಂತ ದೊಡ್ಡದು ಯಾವುದೂ ಇಲ್ಲ.



**ಕೆಲವು ಸರಳ ನಿಯಮಗಳು:**

೧. ಬೆಳಿಗ್ಗೆ ಐದು ಗಂಟೆಗೆ ಮುಂಚೆ ಏಳಬೇಕು. ಆರು ಗಂಟೆಯವರೆಗೂ ದಿವ್ಯ ನಾಮದ ಪುನರುಕ್ತಿ ಮತ್ತು ದೇವರ ಉನ್ನತ ಗುಣಧರ್ಮಗಳ ಧ್ಯಾನ ಮಾಡಿ.

೨. ಸಾತ್ವಿಕ ಆಹಾರವನ್ನು ಸೇವಿಸಿ ಮತ್ತು ಉದ್ದೀಪನಗೊಳಿಸುವ ಆಹಾರಗಳನ್ನು ತ್ಯಜಿಸಿ.

೩. ಭಾವೋದ್ರೇಕಗೊಳಿಸುವ ಸಾಹಿತ್ಯವನ್ನು ಓದದೆ ಸಾಧು ಸಂತರ ಜೀವನ ಚರಿತ್ರೆ ಮತ್ತು ಅವರ ಬೋಧನೆಗಳನ್ನು ಓದಿ.

೪. ಧಾರ್ಮಿಕ ಅಥವಾ ಯಾವುದೇ ವಿಷಯದ ಬಗ್ಗೆ ಯಾರೊಡನೆಯೂ ಚರ್ಚೆ ಮಾಡಬೇಡಿ.

೫. ಜೀವನದಲ್ಲಿ ಸರಳ ಪದ್ಧತಿಯನ್ನು ಅನುಸರಿಸಿ.

೬. ಅಗತ್ಯವಿರುವವರಿಗೆ ಸಹಾನುಭೂತಿ, ಸಹಕಾರ ಹಾಗೂ ದಯೆ ತೋರಿ ಉಪಕಾರ ಮಾಡಿರಿ.

೭. ಬೇರೆ ಕಾರ್ಯದಿಂದ ವಿಮುಖರಾದಾಗ ದಿವ್ಯನಾಮ ಸ್ಮರಣೆ ನಿಮ್ಮ ತುಟಿಯ ಮೇಲಿರಲಿ.

೮. ಏಕಾಂತತೆಯತ್ತ ಒಲಿದು ಒಮ್ಮೊಮ್ಮೆ ಅದಕ್ಕೆ ಮೊರೆ ಹೋಗಿ. ಯಾವುದಾದರೂ ಶಾಂತಿಯುತ ಪ್ರದೇಶದಲ್ಲಿ, ದೇವರಲ್ಲಿ ಲೀನವಾಗ ಬಹುದು.

೯. ಸಂತರ ಸಂಗ ಮಾಡಿ.

೧೦. ಬ್ರಹ್ಮಚರ್ಯ ಪಾಲಿಸಿ.

೧೧. ಇಂದ್ರಿಯಗಳ ಸುಖದಲ್ಲಿ ಮುಳುಗಿರುವ ವ್ಯಕ್ತಿಗಳ ಸಂಗ ಮಾಡಬೇಡಿ.

೧೨. ನಿಮ್ಮ ಆಲೋಚನೆ, ಮಾತು ಮತ್ತು ಕೃತ್ಯಗಳನ್ನು ಪರಿಪೂರ್ಣವಾಗಿ ಶುದ್ಧವಾಗಿಡಿ.

ಶಿಸ್ತಿನ ಜೀವನ, ಕರ್ತವ್ಯ ಪಾಲನೆ, ತಾಳ್ಮೆಯಿಂದ ಕೂಡಿದ ಉತ್ಸಾಹಭರಿತ ಪ್ರಕೃತಿಗಳೇ ನಿಜವಾದ ದೈವಭಕ್ತನ ಲಕ್ಷಣಗಳು.

ಆಂತರಿಕ ಪ್ರಚೋದನೆಯಿಂದ ವರ್ತಮಾನದ ಜೀವನದ ಹಾದಿಯನ್ನು ಬದಲಿಸಿಕೊಂಡು ನಂತರ ಪಶ್ಚಾತ್ತಾಪಕ್ಕೆ ಎಡೆ ಮಾಡಿಕೊಡಬೇಡಿ. ನಿಮ್ಮ ಅಮರತ್ವವನ್ನು ಅರಿಯುವುದು ಮಾನವಕುಲಕ್ಕೆ ನಿಸ್ವಾರ್ಥ ಸೇವೆ ಮಾಡುವುದೇ ನಿಮ್ಮ ಗುರಿ. ಈ ಗುರಿ ಸಾಧನೆ ನೀವಿರುವ ಜಾಗದಿಂದಲೇ ಪ್ರಾರಂಭವಾಗಬೇಕು. ಕಷ್ಟ ಮತ್ತು ದುಃಖ ಇದ್ದೇ ಇರುತ್ತವೆ. ಪರಿಶ್ರಮವಿಲ್ಲದೆ ಏನನ್ನೂ ಸಾಧಿಸುವುದಕ್ಕೆ ಸಾಧ್ಯವಿಲ್ಲ.

ದಿವ್ಯ ಮಂತ್ರದ ಪುನರುಕ್ತಿ ತನ್ಮಯತೆ ಪಡೆಯುವ ಸುಲಭದ ವಿಧಾನ. ಬೆಳಗ್ಗೆ ಮತ್ತು ಸಂಜೆ ದೇವರನ್ನು ಸ್ವಲ್ಪ ಹೊತ್ತು ನೆನಪಿಸಿಕೊಳ್ಳಿ. ಭಗವದ್ಗೀತೆಯನ್ನು ಪ್ರತಿದಿನವೂ ಪಾರಾಯಣ ಮಾಡಿ. ಸರಳ ಜೀವನಶೈಲಿಯನ್ನು ಅನುಸರಿಸಿ. ನಿಮ್ಮಲ್ಲಿಗೆ ಬಂದವರಿಗೆ ಸಹಾಯ ಮಾಡಿ. ಕಷ್ಟದಲ್ಲಿರುವವರಿಗೆ ಸೇವೆ ಮಾಡಿದರೆ ಅದೇ ನಿಜವಾಗಿ ದೇವರಿಗೆ ಪೂಜೆ ಸಲ್ಲಿಸಿದ ಹಾಗೆ.

ನಿಮ್ಮ ಬಗ್ಗೆ ಯಾರೊಡನೆಯೂ ಹೇಳಿಕೊಳ್ಳಬೇಡಿ. ವೈಯಕ್ತಿಕ ಉಲ್ಲೇಖಗಳನ್ನು ದೂರವಿಡಿ. ಯಾವಾಗಲೂ ರಾಮನ ಭವ್ಯತೆ, ಅವನ ಶಕ್ತಿ ಮತ್ತು ಅವನ ನೆಮ್ಮದಿಯ ಬಗ್ಗೆಯೇ ಮಾತನಾಡಿ.

ಎಲ್ಲ ಬಾಹ್ಯ ಆಡಂಬರ ಮತ್ತು ಪ್ರದರ್ಶನಗಳನ್ನು ತೊರೆಯಿರಿ. ಸಾಧಕ ಸಂಜೆ ಲಘು ಆಹಾರ ತೆಗೆದುಕೊಳ್ಳಬೇಕು. ಮಿತವಾಗಿ ನಿದ್ದೆ ಮಾಡಬೇಕು. ಹಗಲು ಮತ್ತು ಮಧ್ಯಾಹ್ನದ ವೇಳೆ ಕೂಡ ನಿದ್ದೆ ಮಾಡಬಾರದು. ಪ್ರಾಪಂಚಿಕ ಸಂಬಂಧಗಳನ್ನು ತ್ಯಜಿಸಬೇಕು.

ಸತ್ಯ ಮಾರ್ಗವೆಂದರೆ ಧ್ಯಾನಕ್ಕಾಗಿ ಪ್ರತ್ಯೇಕವಾಗಿಸಿಕೊಳ್ಳುವುದಾಗಲೀ ಅಥವಾ ಪ್ರಾಪಂಚಿಕ ವಸ್ತುಗಳನ್ನರಸುತ್ತ ಹೋಗುವುದಲ್ಲ. ಅಂದರೆ ಈ ಎರಡರ ಮಿಶ್ರಣ– ಅಂದರೆ ಕೆಲವು ಗಂಟೆಗಳನ್ನು ಧ್ಯಾನಕ್ಕೆ ಮೀಸಲಿಡುವುದು. ಇದರಿಂದ ಬೇರೆ ಕೆಲಸಗಳಲ್ಲಿ ಒಳಗಿನ ಚಿರಂತನ ಸತ್ಯತೆಯು ಪರಮಸುಖದಿಂದ ಹರಿಯುತ್ತದೆ.

ಯಾವುದೇ ಕಾರ್ಯವಾಗಲೀ ಎಷ್ಟೇ ಒಳ್ಳೆಯದಾಗಿದ್ದರೂ ಆಂತರಿಕ ಮೂಲ ತಿಳಿಯದೆ ಮಾಡಬೇಡಿ.

**ಪ್ರಶ್ನೆ:** ದೇವರನ್ನು ಅರಿಯುವ ಹಾದಿಯಲ್ಲಿ ಆಧ್ಯಾತ್ಮಿಕ ಆಕಾಂಕ್ಷಿಗೆ ಎದುರಾಗುವ ಮುಖ್ಯ ಅಡಚಣೆಗಳು ಯಾವುವು?

**ಉತ್ತರ :** ಆಧ್ಯಾತ್ಮಿಕ ದುರಹಂಕಾರವೇ ಅವನ ಪ್ರಗತಿಗೆ ಅಡ್ಡ ಬರುತ್ತದೆ.

ಗುರಿ ಸಾಧಿಸುವಲ್ಲಿ ಅಡ್ಡ ಬರುವುದು ಅವನ ದುರಭಿಮಾನ. ತನ್ನ ಕಠಿಣ ಶಿಸ್ತಿನಿಂದ ತಾನು ಎಲ್ಲರಿಗಿಂತ ಶ್ರೇಷ್ಠ ಎಂದು ತಿಳಿದುಕೊಳ್ಳುತ್ತಾನೆ. ಆದ್ದರಿಂದ ಸಾಧಕನು ಆಗಿಂದಾಗ್ಗೆ ಮನಸ್ಸಿಗೆ ತನ್ನ ಸಾಧನೆ ನಡೆಯುತ್ತಿರುವುದು ಆ ದೇವರ ಚಿತ್ತ ಮತ್ತು ಶಕ್ತಿಯಿಂದ ಮಾತ್ರ ಎಂದು ತಿಳಿಸುತ್ತಿರಬೇಕು.

ಸಾಧಕನು ತನ್ನ ಧಾರ್ಮಿಕ ಅನುಭವಗಳನ್ನು ತನ್ನ ಗುರು ಅಥವಾ ಯಾರಾದರೂ ಸಂತನಿಗೆ ಹೇಳಬೇಕಲ್ಲದೆ ಬೇರೆ ಯಾರಿಗೂ ಹೇಳಬಾರದು. ಈ ನಿಯಮಗಳನ್ನು ಪಾಲಿಸದಿದ್ದರೆ ಯಾರೂ ಕೇಳುವುದಿಲ್ಲವಲ್ಲದೆ ತನ್ನ ಆಧ್ಯಾತ್ಮಿಕ ಬೆಳವಣಿಗೆಯ ಪ್ರಗತಿಯಲ್ಲಿ ಇದು ದೊಡ್ಡ ತಡೆಯಾಗುತ್ತದೆ.

ಸಾಧಕನಿಗೆ ಹೋರಾಟದಲ್ಲಿ ಖಿನ್ನತೆ ಆವರಿಸಿದಾಗ ಅವನು ಆಗ ತನ್ನ ಆಂತರಿಕ ಸತ್ಯಕ್ಕೆ ಶರಣಾಗಬೇಕು.



ಅನುಕರಣೆ ಆಧ್ಯಾತ್ಮಿಕ ರಂಗದಲ್ಲಿ ಪ್ರಗತಿಗೆ ಮಾರಕ. ಶ್ರೇಷ್ಠರ ಮಾತುಗಳನ್ನು ಅನುಕರಿಸುವುದು ಯಥಾರ್ಥದ ಚಿಹ್ನೆಯಲ್ಲ. ನಿಮ್ಮೊಳಗೆ ಒಳಹೊಕ್ಕು ನಿಮ್ಮ ಸ್ವಂತ ಆಧ್ಯಾತ್ಮಿಕ ಅನುಭವದ ಆಣಿಮುತ್ತನ್ನು ಹೊರತನ್ನಿ. ನಿಮ್ಮ ಬೆಳಕನ್ನು ಬೆಳಗಿಸಿ. ಸತ್ಯವೆಂಬ ಪ್ರಜ್ವಲಿಸುವ ಸೂರ್ಯನಾಗಿ ನಿಮ್ಮ ಜೀವನವನ್ನು ಮತ್ತು ಪ್ರಪಂಚವನ್ನು ಅಲಂಕರಿಸಿ.

ಅನುಕರಣೆ ಹಾನಿಕಾರಕ. ಪ್ರತಿಯೊಬ್ಬನೂ ತನ್ನ ಆಧ್ಯಾತ್ಮಿಕ ಹಾದಿಯಲ್ಲಿನ ವಿಕಾಸವನ್ನು ತಾನೇ ವಿಶಿಷ್ಟವಾಗಿ ತನ್ನದೇ ರೀತಿಯಲ್ಲಿ ಹೊಂದಬೇಕು.

ಭಕ್ತಿಯನ್ನು ಹೆಚ್ಚಿಸಲು ಈ ಮೂರು ಅಂಶಗಳು ಅತಿ ಅವಶ್ಯಕ:

೧. ರಾಮ ನಾಮದ ಎಡಬಿಡದ ಜಪ.

೨. ಎಲ್ಲ ವಸ್ತು ಮತ್ತು ಜೀವಿಗಳಲ್ಲಿ ರಾಮನನ್ನು ಕಾಣುವುದು.

೩. ಪರಿತ್ಯಾಗದ ಭಾವದಿಂದ ಎಲ್ಲ ಕಷ್ಟಗಳನ್ನು ಸಹಿಸಿಕೊಳ್ಳುವುದು.

**ಶರಣಾಗತಿಗೆ ಕೊಂಡೊಯ್ಯುವ ವಿಧಾನಗಳು:**

೧. ದೇವರ ಇಚ್ಛೆಯೇ ಪರಮಶ್ರೇಷ್ಠ ಎಂದು ಒಪ್ಪಿಕೊಳ್ಳುವುದು;

೨. ದೇವರು ಯಾವಾಗಲೂ ಒಳ್ಳೆಯವನು ಮತ್ತು ಮಮತಾಮಯಿ ಎಂದು ಅರಿತುಕೊಳ್ಳುವುದು.

೩. ದೇವರು ವಿಶ್ವರೂಪ ಧರಿಸಿ ಎಲ್ಲ ಪ್ರಾಣಿಪಕ್ಷಿ ಮನುಷ್ಯ ಮತ್ತು ಪ್ರತಿಯೊಂದು ವಸ್ತುವಿನ ರೂಪ ಪಡೆದಿದ್ದಾನೆ ಎಂದು ಒಪ್ಪಿಕೊಳ್ಳುವುದು.

ಮನಸ್ಸಿನ ಮೇಲೆ ವಿಜಯ ಸಾಧಿಸುವುದಕ್ಕಿಂತ ಮನುಷ್ಯನಿಗೆ ಮತ್ತಾವ ವಿಷಯವೂ ಮಹತ್ತರವಾದುದಲ್ಲ. ತನ್ನೊಳಗಿನ ಮನೋವಿಕಾರ ನಿಗ್ರಹಿಸಿ ಅದರಿಂದುಂಟಾಗುವ ಆವೇಶಭರಿತ ಕಾರ್ಯಗಳನ್ನು ತಡೆಯುತ್ತಾನೋ ಅವನೇ ನಿಜವಾದ ನಾಯಕ. ದೈಹಿಕ ತೊಂದರೆಗಳಿಗೆ ಮನಸ್ಸಿನ ತುಮುಲವೇ ಕಾರಣ. ಆದ್ದರಿಂದ ಜಗತ್ತನ್ನು ವ್ಯಾಪಿಸಿರುವ ಮಹಾಸತ್ಯದ ಅರಿವಿನಿಂದ ಮನಸ್ಸಿನ ಮೇಲೆ ಹಿಡಿತ ಸಾಧಿಸಿಕೊಂಡಾಗ ಮಾತ್ರ ತನಗೂ ಶಾಂತಿ ದೊರಕುವುದಲ್ಲದೆ ವಿಶ್ವ ಶಾಂತಿ ಸಿಗುವುದು ಸಾಧ್ಯ. ಸಮಚಿತ್ತತೆ ಮತ್ತು ಶಾಂತಿಗಾಗಿ ಏನೇ ತೇಪೆ ಹಾಕಿದರೂ ಅದು ಉಪಯೋಗಕ್ಕೆ ಬರುವುದಿಲ್ಲ. ಬೇರೆಯವರ ಖರ್ಚಿನಲ್ಲಿ ತಾನು ವಸ್ತು, ಅಧಿಕಾರ, ಹೆಸರು, ಆಸ್ತಿ ಇವನ್ನೆಲ್ಲ ಪಡೆಯುವ ಹೃದಯದ ಆಸೆಯನ್ನು ತೆಗೆದುಹಾಕಬೇಕು. ಹೊರಗಿನ ಶತ್ರುಗಳನ್ನು ಸೋಲಿಸುವುದಕ್ಕಿಂತ ಆಂತರಿಕ ಶತ್ರುಗಳನ್ನು ಸೋಲಿಸುವವನೇ ನಿಜವಾದ ಸೈನಿಕ.

* * * *

# ೧೦. ಧ್ಯಾನ

ನಿಮ್ಮ ಆತ್ಮವೇ ನಿಮ್ಮ ನಿಜವಾದ ಅಸ್ತಿತ್ವ. ಇದರ ಸೌಂದರ್ಯವನ್ನು ನಿಮ್ಮ ಮನಸ್ಸೆಂಬ ಮುಸುಕು ಮುಚ್ಚಿಬಿಟ್ಟಿದೆ. ಆತ್ಮ ಸಮರ್ಪಣೆ ಮತ್ತು ಧ್ಯಾನದಿಂದ ಈ ಮುಸುಕನ್ನು ತೆಗೆದುಬಿಡಿ. ಆಗಾಗ ನಿಮ್ಮೊಳಗೇ ಹೊಕ್ಕು ನಿಮ್ಮ ಅಹಂಕಾರವನ್ನು ನಿಮ್ಮ ಆತ್ಮದಲ್ಲಿ ಕಳೆದುಕೊಂಡುಬಿಡಿ. ನೀವೇ ಸತ್ಯವು ಮೂರ್ತಿವೆತ್ತ ರೂಪ. ಈ ಅರಿವಿಗೆ ಎಚ್ಚೆತ್ತುಕೊಳ್ಳಿ.

**ಏಕಾಗ್ರತೆ:**

ಆರಂಭ ದೆಸೆಯಲ್ಲಿರುವವರಿಗೆ ಬೇಕಾಗಿರುವುದು ಅಲೆದಾಡುವ ಮನಸ್ಸನ್ನು ಹಿಡಿದಿಡುವ ಸತತ ಅಭ್ಯಾಸ ಮತ್ತು ಏಕಾಗ್ರತೆ. ಇದಕ್ಕಾಗಿ ರಾಮದಾಸರು ಗುರು ಮಂತ್ರದ ಸತತ ಉಚ್ಚಾರಣೆಯನ್ನು ಕಂಡುಹಿಡಿದರು. ಇದರಿಂದ ಅಲೆದಾಡುವ ಮನಸ್ಸು ಒಂದು ಬಿಂದುವಿನೆಡೆ ಕೇಂದ್ರೀಕೃತವಾಗುತ್ತದೆ.

ಈ ಬಿಂದುವೇ ದೇವರು– ಅದೇ ಮಂತ್ರದ ಆತ್ಮ ಮತ್ತು ಸಂಕೇತ.

**ಧ್ಯಾನ:**

ಈ ಮಂತ್ರದ ಪುನರುಕ್ತಿಯ ಜೊತೆಗೆ ದೇವರ ವಿಶಿಷ್ಟ ಗುಣಗಳನ್ನು ಮನಸ್ಸಿಗೆ ತಂದುಕೊಳ್ಳಿ.

"ದೇವರು ನನ್ನೊಳಗಿದ್ದಾನೆ– ದೇವರು ಅನಂತ– ದೇವರು ಪರಮಸುಖ ಪವಿತ್ರ ಮತ್ತು ಶಾಂತಿ– ದೇವರು ಬೆಳಕಿನ ಬೆಳಕು ಮತ್ತು ಪ್ರಭಾವಗಳ ಪ್ರಭಾವ– ದೇವರು ವಿಶ್ವಕ್ಕೇ ಅಧಿಪತಿ– ದೇವರು ಕಾರ್ಯ ಮಾಡುವವನು ಮತ್ತು ಮಾಡದಿರುವವನು– ದೇವರು ಜ್ಞಾನ ಮಮತೆ ಕರುಣೆ ಮತ್ತು ಕ್ಷಮೆ– ದೇವರು ಒಂದು ಸತ್ಯ ಮತ್ತು ಒಂದು ವಾಸ್ತವ– ಈ ವಿಶ್ವ ದೇವರ ಅಂತರ್ಜ್ಞಾನ, ಎಲ್ಲ ಜೀವಿಗಳಲ್ಲಿ, ವಸ್ತುಗಳಲ್ಲಿ ದೇವರು ನೆಲೆಸಿದ್ದಾನೆ– ವಿಶ್ವದಲ್ಲಿ ದೇವರು ತಾನೇತಾನಾಗಿ ಪ್ರಕಟಗೊಳ್ಳುತ್ತಾನೆ– ನಮ್ಮ ದೇಹ, ಮನಸ್ಸು ಬುದ್ಧಿಗಳಲ್ಲಿ ದೇವರು ವಾಸಿಸುತ್ತಾನೆ– ದೇವರು ನನ್ನ ಅಸ್ತಿತ್ವವನ್ನೇ ವ್ಯಾಪಿಸಿದ್ದಾನೆ– ಕಾಣಿಸುವುದು ಮತ್ತು ಕಾಣಿಸದಿರುವ ದೇವರ ಪ್ರತಿಕೃತಿ ದೇವರಲ್ಲದೆ ಏನೂ ಇಲ್ಲ– ಎಲ್ಲ ದೇವರೇ– ದೇವರೇ ಎಲ್ಲ."



ಒಂದು ಆತ್ಮ ಸೂಚನೆಯೇ ಧ್ಯಾನ. ಮನಸ್ಸಿನ ಮೇಲೆ ನಮ್ಮ ಇರುವಿನ ನಶ್ವರತೆಯನ್ನು ಬಡಿಯುತ್ತಾ ಬಂದರೆ ಅಜ್ಞಾನವೆಂಬ ಮುಸುಕನ್ನು ಕಳಚಬಹುದು. ಧ್ಯಾನವನ್ನು ಸಫಲವಾಗಿ ಮಾಡಬೇಕಾದರೆ ಮನಸ್ಸಿನ ಮೇಲೆ ಹಿಡಿತ ಇರಬೇಕು. ಇದನ್ನು ಸಾಧಿಸುವುದಕ್ಕೆ ಈ ಕೆಳಗಿನ ನಿಯಮಗಳನ್ನು ಪಾಲಿಸಬೇಕು:

೧. ಸಾತ್ವಿಕ ಆಹಾರ
೨. ಏಕಾಂತ
೩. ಸಂತರ ಸಂಗ
೪. ಭಕ್ತಿ ಸಂಗೀತ
೫. ಮಹಾನ್ ಸಾಧುಸಂತರ ಜೀವನ ಮತ್ತು ಅವರ ಬೋಧನೆಗಳನ್ನು ಓದುವುದು.

**ನಿಶ್ಶಬ್ದ ಧ್ಯಾನದ ಭಂಗಿ ಮತ್ತು ವಿಧಾನ:**

೧. ನಿಮಗೆ ಅನುಕೂಲವಾದ ಆಸನದಲ್ಲಿ ಬೆನ್ನು ಮತ್ತು ತಲೆಯನ್ನು ನೇರವಾಗಿ ಇರುವಂತೆ ಕುಳಿತುಕೊಳ್ಳಿ.
೨. ಕಣ್ಣುಗಳನ್ನು ಮುಚ್ಚಿಕೊಳ್ಳಿ; ಆದರೆ ಒಳಗಿನಿಂದ ನಿಮ್ಮ ದೃಷ್ಟಿಯಿಂದ ಹುಬ್ಬಿನ ಮಧ್ಯಕ್ಕೆ ತಂದು ನಿಲ್ಲಿಸಿ ಮತ್ತು ಅದನ್ನು ಶಿರೋಭಾಗದಲ್ಲಿ ನಿಲ್ಲಿಸಿ.
೩. ಮನಸ್ಸನ್ನು ಒಂದೆಡೆ ನಿಲ್ಲಿಸಲು ಮಂತ್ರವನ್ನು ಮನಸ್ಸಿನಲ್ಲೇ ಸ್ವಲ್ಪಕಾಲ ಉಚ್ಚರಿಸಿ.
೪. ಮನಸ್ಸು ಶಾಂತವಾದಾಗ ದೇವರ ಗುಣಗಳನ್ನು ಮನಸ್ಸಿನಲ್ಲಿ ಹೇಳಿಕೊಳ್ಳಿ.
೫. ಇದನ್ನು ಪ್ರತಿದಿನ ಮಾಡಿದಾಗ ಆತ್ಮದಲ್ಲಿ ಲೀನವಾಗುತ್ತೀರಿ ಮತ್ತು ಬೆಳಕಿನ ದರ್ಶನವಾಗುತ್ತದೆ.
೬. ಆತ್ಮದ ನಿಶ್ಶಬ್ದ ಮತ್ತು ಶಾಂತತೆಯತ್ತ ಇನ್ನೂ ಒಳಹೋಗಿ. ದೈಹಿಕದಿಂದ ಮೇಲೆ ಬನ್ನಿ. ಈಗ ನೀವು ದೇವರೊಂದಿಗಿನ ನಿಜವಾದ ಅನನ್ಯತೆ ಅನುಭವಿಸುತ್ತೀರಿ.
೭. ಈ ಅನುಭವದಿಂದ ಹೊರಬನ್ನಿ– ಮೊದಲಿಗೆ ಕಷ್ಟವಾದರೂ ಆತ್ಮ ಸ್ಥೈರ್ಯದಿಂದ ಆಗುತ್ತದೆ ಮತ್ತು ಈಗ ಇಡೀ ವಿಶ್ವವೇ ದೇವರ ಪ್ರಕಟಣೆಯಂತೆ ಕಾಣುತ್ತದೆ– ಎಲ್ಲೆಡೆ ದೇವರ ಬೆಳಕು ಕಣ್ಣು ಕೋರೈಸುತ್ತದೆ; ಪ್ರಕೃತಿಯ ವಿವಿಧ ಚಟುವಟಿಕೆಗಳ ನಡುವೆಯೂ ನಿಮಗೆ ಮನಸ್ಸು ಎಲ್ಲೆಡೆ ಪಸರಿಸಿ ನಿಶ್ಶಬ್ದ ಮತ್ತು ಅನಂತ ಶಾಂತಿಗೆ ಕಾರಣವಾಗುತ್ತದೆ– ಈ ಜಾಗೃತಿ ಶಾಶ್ವತ.

ನೀವು ವಾಸ್ತವಿಕತೆಯ ಕ್ರೂರ ಕಷ್ಟಗಳಿಂದ ಮುಕ್ತರಾದಂತಾಗುತ್ತೀರಿ ಮತ್ತು ಅನಿರ್ವಚನೀಯ ಭಾವಾವೇಶವನ್ನು ಅನುಭವಿಸುತ್ತೀರಿ.

**ಅನಿರ್ವಚನೀಯ ಭಾವಾವೇಶ :**

ದೇವರ ಪರಮಶ್ರೇಷ್ಠ ಜಾಗೃತಿಯಲ್ಲಿ ವ್ಯಕ್ತಿಯ ಮನಸ್ಸು ಲೀನವಾದಾಗ ಅನುಭವಿಸುವ ಅನಿರ್ವಚನೀಯ ಪರಮ ಸುಖವೇ ಮನುಷ್ಯನ ಅತಿ ದೊಡ್ಡ ಗಳಿಕೆ. ನಮ್ಮೊಳಗಿನ ಶಾಶ್ವತ ಆನಂದದ ಮೂಲ ತೆರೆದಾಗ, ಅದು ನಮ್ಮ ಜೀವದ ಕಣಕಣದಲ್ಲೂ ಹರಿದು ನಮ್ಮ ಜೀವನವನ್ನು ಅಲೆಯಿಲ್ಲದ ಶಾಂತತೆ ಮತ್ತು ನಿಲ್ಲದ ಭಾವಾವೇಶದಿಂದ ತುಂಬುತ್ತದೆ. ಸಾವು, ಭಯ, ನೋವು ಇವೆಲ್ಲ ಮಹತ್ವ ಕಳೆದು ಕೊಳ್ಳುತ್ತವೆ. ನಮಗೆ ಪರಮ ಜೀವನ, ಪರಮ ಸತ್ಯ ಎಲ್ಲೆಡೆ ಕಾಣುತ್ತದೆ.

ಒಂದು ಸುಂದರ ದಿವ್ಯ ಬೆಳಕು ಎಲ್ಲೆಡೆ ಪಸರಿಸುತ್ತದೆ; ಅನಂತ ಶಾಂತಿ ಮತ್ತು ಆನಂದದ ಒಂದು ದರ್ಶನ ನಿಮ್ಮ ಕಣ್ಣು ಕೋರೈಸುತ್ತದೆ. ಆಗ ನೀವು, ನೀವು ಮತ್ತು ವಿಶ್ವ ಎಲ್ಲ ಅಮರ ಸತ್ಯದ ರೂಪ ಎಂದು ಅರಿತುಕೊಳ್ಳುತ್ತೀರಿ. ಓ! ಈ ಘನ ಉನ್ನತ ಸ್ಥಿತಿ ಅವರ್ಣನೀಯ ಸ್ಥಿತಿ– ಈ ಅಮರತೆಯ ಮಧುರ ಅಮೃತದಿಂದ ತುಂಬಿದವರೇ ಧನ್ಯರು.

* * * *



# ೧೧. ಸಮಾಧಿ

ಒಂದು ಕಡೆ ಒಂದು ಖಚಿತ ಭಂಗಿಯಲ್ಲಿ ಕುಳಿತುಕೊಂಡು ಧ್ಯಾನದಿಂದ ಅನಂತದಲ್ಲಿ ಲೀನವಾಗಿ ಹೊರ ಜಗತ್ತನ್ನು ಮರೆಯುವುದು ಒಂದು ಬಗೆಯ ಸಮಾಧಿ.

ಇನ್ನೊಂದು ಬಗೆ ಸಹಜ ಸಮಾಧಿ (ಅನಿರ್ವಚನೀಯ ಆನಂದದಸ್ಥಿತಿ). ಇದನ್ನು ಸಂತರು ಎಲ್ಲ ಕಡೆಯಲ್ಲಿಯೂ ಎಲ್ಲ ಸಮಯದಲ್ಲಿಯೂ ಅನುಭವಿಸುತ್ತಾರೆ.

ನಾವು ಶಾಂತಿ ಮತ್ತು ಆನಂದವನ್ನು ಎಲ್ಲೆಡೆ ಹುಡುಕುತ್ತೇವೆ. ಈ ಆನಂದವೇ ಸಹಜಾನಂದ ಮತ್ತು ಈ ಸ್ಥಿತಿಯೇ ಸಮಾಧಿ. ಈ ದಿವ್ಯ ಪ್ರಾಪ್ತಿಯಲ್ಲಿ ಆತ್ಮ ದಿವ್ಯ ಭಾವಾವೇಶವನ್ನು, ಹೊರಗಿನ ಯಾವುದೇ ಆಗುಹೋಗುಗಳಿಗೆ ಸ್ಪಂದಿಸದೆ ಅನುಭವಿಸುತ್ತದೆ. ಏಕೆಂದರೆ ಅವನು ಎಲ್ಲ ಬದಲಾವಣೆ ಮತ್ತು ಚಟುವಟಿಕೆಗಳನ್ನು ನಿರಂತರ ಆನಂದವೆಂದು ತಿಳಿದು ಅನುಭವಿಸುತ್ತಾನೆ.

ಮೊದಲನೆಯದು ಸಹಜ ಸಮಾಧಿ ಪಡೆಯುವ ಅಗತ್ಯ. ದೇವರು ಪ್ರೀತಿ ಮತ್ತು ವಿಶ್ವವೇ ದೇವರೆಂದು ಅರಿಯಿರಿ. ದೇವರು ಆಕಾರ ಮತ್ತು ನಿರಾಕಾರ– ವಿಶೇಷಣಗಳುಳ್ಳವನು ಮತ್ತು ಇಲ್ಲದವನು ಎಂದು ಅರಿಯಿರಿ. ಗುಣವಿಶೇಷಣ ಗಳಿಲ್ಲದ ನಿರಾಕಾರ ದೇವರು ಉಚ್ಚರಿಸಲಾಗದವನು. ವಿಶೇಷಣಗಳುಳ್ಳ ಆಕಾರ ವಿರುವ ದೇವರು ಪ್ರೀತಿ, ಬೆಳಕು, ಪರಮ ಸುಖ, ಸತ್ಯ, ಜ್ಞಾನ ಮತ್ತು ಜಾಗೃತಿಯ ಮೂರ್ತಿ. ಆಕಾರವುಳ್ಳ ದೇವರು ವಿಶ್ವ ಮತ್ತು ಅದರೊಳಗಿನ ಎಲ್ಲವೂ ಆಗಿರುತ್ತಾನೆ.

ನೀವು ಜ್ಞಾನಿಗಳು, ಓದಿದವರು, ಅಧ್ಯಾತ್ಮವನ್ನು ಪಾಲಿಸಿದವರು, ಪವಿತ್ರತೆಯ ಉಡುಪು ಧರಿಸಿರುವವರು, ಉಪದೇಶ ನೀಡುತ್ತೀರಿ– ಆ ದೇವನೊಡನೆ ಲೀನವಾಗುವ ಆನಂದವನ್ನು ಅನುಭವಿಸದಿದ್ದರೆ ಇವು ಯಾವುದೂ ಸಾಧ್ಯವಿಲ್ಲ. ಸಗುಣ ನಿಮ್ಮ ಮನಸ್ಸಿನ ಒಂದು ಪ್ರತಿರೂಪವಷ್ಟೇ– ಅದು ನಿಮ್ಮನ್ನು ಸುಖಪಡಿಸುವುದಿಲ್ಲ. ಮನಸ್ಸು ಮತ್ತು ನೋಟ ಇವೆಲ್ಲ ಆಕಾರದಿಂದ ನೀವು ಮೇಲೇರಬೇಕು. ಅವನು ವಿಶ್ವದ ಹುಟ್ಟು, ಸಾವು, ಅಧಿಕಾರ, ಜೀವಿಗಳ ಮತ್ತು ವಸ್ತುಗಳ ಅಳಿವು– ಇವೆಲ್ಲವುಗಳ ಸಾಕಾರ ಸಗುಣವೇ ದೇವರು. ಅವನು ಉತ್ಕೃಷ್ಟ, ನಿಷ್ಕಳಂಕ ಆತ್ಮ. ನಿಮ್ಮ ದೇಹ ಅವನ ಒಂದು ಸ್ಪಷ್ಟೋಕ್ತಿ. ದೇವರ ಹೆಸರು ಹೇಳಿಕೊಂಡು ನಶ್ವರ ವಸ್ತುಗಳನ್ನು

ಪಡೆಯಲು ಆಸೆ ಪಡಬೇಡಿ. ಅವು ನಿಮ್ಮ ಮನಸ್ಸಿನ ಭ್ರಾಂತಿಯಷ್ಟೇ. ದೇವರು ಸರ್ವಶಕ್ತ, ಸರ್ವವ್ಯಾಪಿ– ಅವನೊಡನೆ ಲೀನವಾಗುವ ಆಸೆ ಹೊಂದಿರಿ. ಅವನು ಜಗತ್ತಿನ ಸರ್ವಾಧಿಕಾರಿ. ಮನಸ್ಸು ಮತ್ತು ಹೃದಯವನ್ನು ಶಿಸ್ತಿನಿಂದ ಶುದ್ಧಿ ಮಾಡಿ ಅನಿರ್ವಚನೀಯ ಆನಂದವನ್ನು ಹೊಂದಿರಿ.

ಎಲ್ಲಿಯವರೆಗೆ ಭಕ್ತನು ನಾಮ ಮತ್ತು ಆಕಾರವನ್ನು ದಾಟಿ ತನ್ನೊಳಗಿನ ದೇವರನ್ನು ಕಾಣುವುದಿಲ್ಲವೋ, ಎಲ್ಲಿಯವರೆಗೆ ಅವನ ಮನಸ್ಸು ಪವಿತ್ರ ಚಟುವಟಿಕೆ ವಿಶ್ವವನ್ನು ಆವರಿಸಿರುವುದನ್ನು ಅರಿತುಕೊಳ್ಳುವುದಿಲ್ಲವೋ, ಎಲ್ಲ ಆಲೋಚನೆಗಳು, ಸಮಯ, ಸಂದರ್ಭ, ಇಡೀ ವಿಶ್ವವನ್ನೂ ತನ್ನ ಆತ್ಮದ ಒಂದು ಸ್ಪಷ್ಟೋಕ್ತಿ ಎಂದು ಅರಿತುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಅವನು ದಿವ್ಯ, ಸುಂದರ ಸತ್ಯ ದೇವರನ್ನು ಅರಿತುಕೊಳ್ಳಲಾರ.

* * * *



## ೧೨. ಎತ್ತರ ತಲುಪಿದ ನಂತರ

ವಾಸ್ತವಿಕತೆಯ ಈ ನೋಟದಿಂದ, ದೇವರನ್ನು ಅರಿತ ಆತ್ಮ ಮಹಾ ಸತ್ಯದಿಂದ ಬೇರೆಯೇ ಸ್ಥಾನವನ್ನು ಪಡೆಯುತ್ತದೆ. ಅವನು ತನ್ನನ್ನು, ದೇವರ ಮಗ, ಮಗು, ಸೇವಕ ಅಥವಾ ಭಕ್ತನೆಂದು ಕರೆದುಕೊಳ್ಳುತ್ತಾನೆ. ಈ ದ್ವಂದ್ವದಲ್ಲಿ ದೇವರು ಮತ್ತು ಭಕ್ತ ಒಂದೇ ಎಂಬ ಅನಿಸಿಕೆ ಇದೆ. ಈ ಅನಿಸಿಕೆ ಏಕೆಂದರೆ ಈ ಚಟುವಟಿಕೆಯಲ್ಲಿ ದೇವರನ್ನು ಅರಿತವನು ಸೇವಕನಂತೆ ವರ್ತಿಸುತ್ತಾನೆ. ಇದರಿಂದ ಪ್ರೀತಿಯ ಪರಾಕಾಷ್ಠೆಯನ್ನು ತಲುಪಲು ಸಾಧ್ಯ. ಪ್ರೀತಿಯು ದ್ವಂದ್ವದ ತತ್ವದಿಂದಲೇ ಬದುಕಿರುವುದು. ಅವನ ಎಲ್ಲ ಕಾರ್ಯಗಳಲ್ಲಿಯೂ ಪ್ರೀತಿಯಿದೆ, ಪ್ರೀತಿಯೇ ಅವನ ಜೀವನ ಮತ್ತು ಪ್ರೀತಿಯಲ್ಲಿ ಅವನು ತನ್ನ ಧ್ಯೇಯವನ್ನೇ ಕಂಡುಕೊಳ್ಳುತ್ತಾನೆ.

* * * *

## ೧೩. ವಿಶ್ವ ದರ್ಶನವಾದವನ ಗುಣ ವಿಶೇಷಣಗಳು

ಮೊದಲಿಗೆ, ಅವನು ತಾನು ಅಮರನೆಂದೂ ಮತ್ತು ದೇವರೊಂದಿಗೆ ತಾದಾತ್ಮ್ಯವನ್ನು ಪಡೆದಿದ್ದುದಾಗಿ ತಿಳಿದಿರುತ್ತಾನೆ.

ಎರಡನೆಯದಾಗಿ, ಮೊದಲನೆಯದರ ಪರಿಣಾಮವಾಗಿ ಅವನು ಸಾವಿಗಾಗಲೀ ಮತ್ತು ಇತರ ಯಾವುದಕ್ಕೂ ಹೆದರುವುದಿಲ್ಲ.

ಮೂರನೆಯದಾಗಿ, ಸದ್ಗುಣ ಮತ್ತು ಅವಗುಣ– ಇದನ್ನೆಲ್ಲಾ ಮೀರಿದವನು. ದೇವರ ಸಾನ್ನಿಧ್ಯದಲ್ಲಿ ಅವನು ವಾಸಿಸುವಾಗ ಅವನ ಅವಗುಣಗಳೆಲ್ಲಾ ಹೋಗಿ ಅವನು ಶುದ್ಧಿಯಾಗುತ್ತಾನೆ.

ನಾಲ್ಕನೆಯದಾಗಿ, ಅವನ ಅಹಂಕಾರ ನಿರ್ನಾಮವಾಗಿ ಅವನು ಸತ್ವ, ರಜಸ್ ಮತ್ತು ತಮಸ್ ಎಂಬ ಮೂರು ಗುಣಗಳನ್ನು ಮೀರುತ್ತಾನೆ.

ಐದನೆಯದಾಗಿ, ಅವನು ದಿವ್ಯ ಅಮೃತ ಪಾನದಿಂದ ಆನಂದಭರಿತನಾಗುತ್ತಾನೆ.

ಕೊನೆಯದಾಗಿ, ಅವನ ವ್ಯಕ್ತಿತ್ವ ಆಕರ್ಷಕವಾಗಿ ಎಲ್ಲರನ್ನೂ ಚುಂಬಕದಂತೆ ಸೆಳೆಯುತ್ತಾನೆ. ಇದರಿಂದ ಅವನು ತಾನೂ ಸೇರಿದಂತೆ ಯಾರನ್ನೂ ಬಂಧಿಸುವುದಿಲ್ಲ. ಆದರೆ ಎಲ್ಲರನ್ನೂ ಮುಕ್ತಗೊಳಿಸುತ್ತಾನೆ.

* * * *

## ೧೪. ಒಳಗಿನ ದನಿ

"ಭಕ್ತನು ತನ್ನ ದೇಹ, ಮನಸ್ಸು ಮತ್ತು ಆತ್ಮವನ್ನು ತನ್ನೊಳಗಿರುವ ದೇವರಿಗೆ ಸಮರ್ಪಣೆ ಮಾಡಿದಾಗ ಅವನ ಒಳದನಿ ಮಾತನಾಡುತ್ತದೆ. ಈ ಸ್ಥಿತಿಯಲ್ಲಿ ದೇಹ ಒಂದು ಸಾಧನವಾಗುತ್ತದೆ, ಪವಿತ್ರ ತೇಜಸ್ಸಿನಿಂದ ಮನಸ್ಸು ಹೊಳೆಯುತ್ತದೆ ಮತ್ತು ಆತ್ಮ ದಿವ್ಯ ಆತ್ಮದೊಂದಿಗೆ ಲೀನವಾಗುತ್ತದೆ. ಈಗ ದೇವರ ಮಾರ್ಗದರ್ಶನದೊಂದಿಗೆ ಎಲ್ಲ ಕಾರ್ಯಗಳೂ ನಡೆಯುತ್ತವೆ. ವಿಶ್ವ ಜಾಗೃತಿಯೊಡನೆ ಅವನ ಜಾಗೃತಿ ಲೀನವಾಗಿ ಎಲ್ಲ ಸಮಯದ ನಿಬಂಧನೆಯನ್ನು ಮೀರುತ್ತಾನೆ. ದರ್ಶನದ ಸಮಾನತೆ ಭಕ್ತನ ಜೀವನದ ಹಿನ್ನೆಲೆಯಾಗುತ್ತದೆ ಮತ್ತು ಈ ದೃಷ್ಟಿಕೋನ ಅವನ ಹೊರಗಿನ ಜೀವನವನ್ನು ಪ್ರಕಾಶಿಸುತ್ತದೆ.

* * * *

## ೧೫. ಜೀವನ್ಮುಕ್ತ

ಯಾರು ತನ್ನ ಜೀವನವನ್ನು ದೇವರಿಗೆ ಸಮರ್ಪಣೆ ಮಾಡಿರುತ್ತಾನರಯೋ, ಅವನೇ ಜೀವನ್ಮುಕ್ತ. ಇದರಿಂದಾಗಿ ದೇವರು ಇವನ ಮೂಲಕ ಕಾರ್ಯಪ್ರವೃತ್ತನಾಗುತ್ತಾನೆ. ಅವನು ತನ್ನ ವೈಯಕ್ತಿಕ ಅಹಂಕಾರವನ್ನು ತ್ಯಜಿಸಿರುತ್ತಾನೆ. ಅವನು ಯಾವಾಗಲೂ ದೇವರಲ್ಲಿ ಜೀವಿಸುತ್ತಾನೆ ಮತ್ತು ದೇವರು ಇವನಲ್ಲಿ ವಾಸಿಸುತ್ತಾನೆ. ಇವನು ಕೀರ್ತಿ, ಹಣ ಮುಂತಾದ ಐಹಿಕ ಭೋಗಗಳಿಂದ ದೂರವಿರುತ್ತಾನೆ. ಅವನು ತನ್ನ ಆಂತರಿಕ ಚೈತನ್ಯದಲ್ಲಿ ಆಧ್ಯಾತ್ಮಿಕತೆಯ ಆಕರವನ್ನು ಕಂಡುಕೊಳ್ಳುತ್ತಾನೆ ಮತ್ತು ಎಲ್ಲ ಸಮಯಗಳಲ್ಲೂ ತೃಪ್ತನಾಗಿರುತ್ತಾನೆ. ಯಾವ ರೀತಿಯ ಬದಲಾವಣೆಗಳು ಇವನ ಜೀವನದಲ್ಲಿ ಉಂಟಾದರೂ ಅದರಿಂದ ಇವನು ವಿಚಲಿತನಾಗುವುದಿಲ್ಲ. ಅಷ್ಟೇ ಅಲ್ಲದೆ ಅವನ ಮಾನಸಿಕ ಸ್ಥಿತಿಯಲ್ಲಿಯೂ ಯಾವ ಬದಲಾವಣೆಯು ಉಂಟಾಗುವುದಿಲ್ಲ.

ಎಲ್ಲ ಪರಿಸ್ಥಿತಿಯಲ್ಲಿಯೂ ಅವನು ಶಾಂತಿಯುತವಾಗಿರುತ್ತಾನೆ. ಯಾವುದೂ ಅವನನ್ನು ಎದೆಗುಂದಿಸುವುದಿಲ್ಲ.

ಯಾವುದೇ ಕೆಲಸ ಮಾಡಿದರೂ ಅದರ ಹಿಂದೆ ಅವನ ಸ್ವಾರ್ಥವಿರುವುದಿಲ್ಲ ಮತ್ತು ಯಾವ ಬೆದರಿಕೆ, ನೋವು ಅಥವಾ ಸಾವು ಅವನನ್ನು ಆ ಕೆಲಸ ಮಾಡುವುದನ್ನು ತಡೆಯುವುದಕ್ಕಾಗುವುದಿಲ್ಲ. ಏಕೆಂದರೆ ದೇವರೇ ಆ ಕೆಲಸವನ್ನು ಮಾಡಲು ಅವನಿಗೆ ಆದೇಶ ನೀಡಿದ್ದಾನೆ.

ದೇವರು ತನ್ನ ಮೂಲಕ ಕೆಲಸ ಮಾಡುತ್ತಿದ್ದಾನೆ ಎಂಬ ಅರಿವೂ ಅವನಿಗಿರುವುದಿಲ್ಲ. ಆದುದರಿಂದ ಅಹಂಕಾರವಿಲ್ಲದೆ ಅವನು ಕೆಲಸ ಮಾಡುತ್ತಾನೆ.

ಸಾಮಾನ್ಯ ಜನರು ಕೆಲವೊಮ್ಮೆ ಅವನನ್ನು ಹೊಗಳುತ್ತಾರೆ. ಕೆಲವೊಮ್ಮೆ ತೆಗಳುತ್ತಾರೆ. ಯಾರ ಅಭಿಪ್ರಾಯಗಳಿಗೂ ಅವನು ಬದ್ಧನಾಗಿರುವುದಿಲ್ಲ.

ಅವನು ಮುಕ್ತ–ಸದಾಮುಕ್ತ.

ಓಂ. ಶ್ರೀ ರಾಮ್

* * * *



## ೧೬. ಪುನರವಲೋಕನ–೧

**ಪ್ರಶ್ನೆ:** ಸ್ವಾಮೀಜಿ ನಮಗೆ ನೀವು ಬೇಕು, ನೀವು ದೇವರನ್ನು ನೋಡಿರುವಿರಿ. ನಮಗೆ ದಾರಿ ತೋರಿದರೆ ನಾವೂ ಅವನನ್ನು ನೋಡಬಹುದು.

**ಉತ್ತರ:** ಸರಿ, ರಾಮದಾಸರು ಪ್ರಯತ್ನಿಸುತ್ತಾರೆ.

ಮೊದಲ ಅವಶ್ಯಕತೆ– ಹೆಬ್ಬಯಕೆ. ದೇವರನ್ನು ನೀವು ವಿಶೇಷವಾಗಿ ಪ್ರೀತಿಸಬೇಕು ಮತ್ತು ಅವನ ದರ್ಶನಕ್ಕೆ ಹಂಬಲಿಸಬೇಕು. ಪ್ರೀತಿಯಿರುವಲ್ಲಿ ನಿಮ್ಮ ಮನಸ್ಸು ಮಾಂತ್ರಿಕವಾಗಿ ಓಡುತ್ತದೆ. ಇದು ಮುಂದಿನ ಹೆಜ್ಜೆಗೆ ದಾರಿ– ಅದು ಮನಸ್ಸಿನ ಶುದ್ಧೀಕರಣ. ದೇವರೆಡೆಗೆ ಮನಸ್ಸು ತಿರುಗಿದಾಗ, ಕಾಮ, ಕ್ರೋಧ, ದುರಾಸೆಗಳನ್ನು ತೆಗೆದುಹಾಕುತ್ತದೆ. ನಾಲಿಗೆ ಮತ್ತು ದೇಹವನ್ನು ಶುದ್ಧವಾಗಿಡಿ. ನಿಮ್ಮ ಮಾತು ನಿಂದನೆ, ತೆಗಳುವಿಕೆ, ಚಾಡಿ, ಸುಳ್ಳು ಹೇಳುವುದು, ವದಂತಿ ಇವೆಲ್ಲವುಗಳಿಂದ ಮುಕ್ತವಾಗಿರಲಿ. ನಿಮ್ಮ ಶರೀರವು ಕಳ್ಳತನ, ದುರಾಚಾರ ಮತ್ತು ಹಿಂಸೆಯಿಂದ ದೂರವಿರಲಿ.

ರಾಮ ಹತ್ತು ತಲೆಯ ರಾವಣನನ್ನು ಕೊಂದಂತೆ, ರಾಮ ನಾಮದಿಂದ ಈ ಹತ್ತು ತಲೆಯ ದೈತ್ಯನನ್ನು ಕೊಲ್ಲುವುದಕ್ಕೆ ಸಹಾಯ ಮಾಡುತ್ತದೆ.

ಅಹಂಕಾರವನ್ನು ಗೆಲ್ಲುವುದೇ ಮೂರನೆಯ ಹೆಜ್ಜೆ. 'ನಾನು ಎಲ್ಲವನ್ನೂ ಮಾಡಿದ್ದು' ಎಂಬ ತಪ್ಪು ಯೋಚನೆ ಎಷ್ಟೋ ಪೀಳಿಗೆಗಳಿಂದಲೂ ಇದೆ. ನಮ್ಮ ಜೀವನ ಮತ್ತು ಯೋಚನೆಯಿಂದ 'ನಾನು' ಎಂಬುದನ್ನು ತೊಡೆದುಹಾಕಬೇಕು.

ಭಗವದ್ಗೀತೆ ದೇವರ ಎರಡು ಮುಖಗಳಾದ ಪ್ರಕೃತಿ ಮತ್ತು ಪುರುಷರನ್ನು ಬೋಧನೆ ಮಾಡುತ್ತದೆ.

ಮೊದಲನೆಯದು ಪುರುಷನ ನಶ್ವರ ಆಕಾರಗಳ ಹೊರಗಿನ ಪ್ರಾದುರ್ಭಾವವಾದರೆ, ಎರಡನೆಯದು ಪುರುಷನ ಒಳಗಿನ ಅನಂತ ಸತ್ಯ ಅಥವಾ ಎಲ್ಲೆಡೆ ವ್ಯಾಪಿಸಿರುವ ಆತ್ಮ. ಪುರುಷೋತ್ತಮ ಎನ್ನುವುದು ಎರಡೂ ಸೇರಿರುವ ಮತ್ತು ಎರಡನ್ನೂ ಮೀರಿರುವ ದೇವರು. ಅವನನ್ನು ಅನುಭವದಿಂದ ಅರಿಯಬಹುದೇ ವಿನಹ ವಿವರಣೆಯಿಂದಲ್ಲ. ಏಕೆಂದರೆ ಅವನು ಎಲ್ಲವನ್ನೂ ಮೀರಿದವನು. ನಿಮ್ಮ ಜೀವನದ ಕರ್ತವ್ಯವನ್ನು ನಿರ್ವಹಿಸುವಾಗ, ನಿಮ್ಮನ್ನು ಒಂದು ಸಾಧನವನ್ನಾಗಿ ಅವನ ಕೈಯ್ಯಲ್ಲಿಡಿ– ಅವನ ಕೆಲಸವನ್ನು ಅವನದೇ ರೀತಿಯಲ್ಲಿ ಮಾಡುವವನು

ಅವನು. ಇದರಿಂದ ಅವನ ಪರಮ ಗುರಿಯಾದ ವಿಶ್ವಶಾಂತಿ ದೊರಕುವುದು.

ನಿಮ್ಮ ಕಾರ್ಯ ಮತ್ತು ಅದರ ಫಲವನ್ನು ಅವನಿಗೆ ಒಪ್ಪಿಸಿದರೆ ಅದು ನಿಮ್ಮನ್ನು ಮತ್ತು ನಿಮ್ಮ ಸರ್ವಸ್ವವನ್ನೂ ಆ ದೇವರಿಗೆ ಒಪ್ಪಿಸಿಬಿಡುವಂತಹ ಹಂತಕ್ಕೆ ತಂದು ನಿಲ್ಲಿಸುತ್ತದೆ. ನೀವು ಎಲ್ಲದರಲ್ಲಿ ದೇವರನ್ನು, ದೇವರನ್ನು ಎಲ್ಲದರಲ್ಲಿಯೂ ಕಾಣುತ್ತೀರಿ. ಇದು ವಿಶ್ವ ಜಾಗೃತಿ– ಅಂದರೆ ಸರ್ವಸುಖ ಮತ್ತು ಶಾಂತಿಯ ಸ್ಥಿತಿ. ಒಮ್ಮೆ ಮನುಷ್ಯ ಅತಿ ಸಂತೋಷದಲ್ಲಿದ್ದರೆ ಅವನಿಗೆ ಮತ್ತೇನೂ ಬೇಡವಾಗುತ್ತದೆ ಮತ್ತು ಅವನ ಆನಂದ ಮತ್ತು ಶಾಂತಿಯಲ್ಲಿ ಅವನು ಅವನನ್ನೇ ಜಗತ್ತಿನ ನಿಸ್ವಾರ್ಥ ಸೇವೆಗೆ ಮುಡಿಪಾಗಿಡುತ್ತಾನೆ.

ಈ ಸ್ಥಿತಿಯನ್ನು ಹೊಂದಿದ ನಂತರ ಸತ್ಸಂಗ ಮತ್ತು ಧ್ಯಾನ ಇವುಗಳು ಗುರುವಿನ ಅನುಗ್ರಹದ ಜೊತೆಗೆ ಭಕ್ತನ ಮನದ ದಪ್ಪ ಹೊರ ಪೊರೆಯನ್ನು ಕಳಚಿ ಹಾಕುವಲ್ಲಿ ಸಹಾಯವಾಗುತ್ತದೆ. ಯಾವಾಗಲೂ ಹಿರಿಯರ, ಒಳ್ಳೆಯವರ, ಸಜ್ಜನರ ಸಂಗ ಮಾಡಿದರೆ ಅವರ ಜೀವನಶೈಲಿ ಮತ್ತು ಅವರ ಹಿತವಚನ ಬದುಕಿಗೆ ಒಂದು ಸ್ಫೂರ್ತಿಯಾಗುತ್ತದೆ.

ಪ್ರತಿದಿನ ಮನಸ್ಸು ಮತ್ತು ದೇಹ ಪರಿಶುಭ್ರವಾಗಿ ಚುರುಕಾಗಿರುವಾಗ ನಿಗದಿತ ಸಮಯದಲ್ಲಿ ಧ್ಯಾನ ಮಾಡಿ ಮಗುವಿನಂತೆ ನಿಮಗಾಗಿ ಕಾಯುತ್ತಿರುವ ಆ ದಿವ್ಯ ಮಾತೆಯ ಗರ್ಭಗುಡಿ ಅಂದರೆ ನಿಮ್ಮ ಹೃದಯದ ಒಳಭಾಗಕ್ಕೆ ನಡೆಯಿರಿ. ಆತ್ಮಾವಲೋಕನವನ್ನು ಅಭ್ಯಾಸ ಮಾಡಿ. ನಿಮ್ಮ ಮತ್ತು ನಿಮ್ಮದು ಎಂಬ ಎಲ್ಲ ಅಂಶಗಳನ್ನು ಹುಡುಕಿ ತೆಗೆದುಹಾಕಿರಿ; ಆಗ ಅಲ್ಲಿ ಉಳಿಯುವುದು ಶುಭ್ರ, ನಿಷ್ಕಪಟ, ದೇದೀಪ್ಯಮಾನವಾದ ದೇವರೆಂಬ ಸತ್ಯದ ಪ್ರಜ್ವಲಿಸುತ್ತಿರುವ ಬೆಳಕು. ಎಲ್ಲಕ್ಕೂ ಮಿಗಿಲಾಗಿ, ಪ್ರಾಮಾಣಿಕವಾಗಿ ಮತ್ತು ಹೃದಯದಲ್ಲಿ ಹಂಬಲದಿಂದ ಅವನ ದಿವ್ಯ ನಾಮವನ್ನು ಉಚ್ಚರಿಸಿರಿ. ಈ ನಾಮವೇ ದೇವರೆಂಬ ಗುರಿಗೆ ಶ್ರೇಷ್ಠ ದಾರಿ.

* * * *



## ೧೭. ದೇವರ ಅರಿವಿಗೆ ದಾರಿ–೨

ದೇವರಿಂದ ದೇವರಿಗೆ ನೀಡಲ್ಪಟ್ಟ ಅನುಭವದಿಂದ, ರಾಮದಾಸರು ಭಕ್ತನಿಗೆ ಒಂದು ಮಾರ್ಗವನ್ನು ಸೂಚಿಸುತ್ತಾರೆ. ಈ ಮಾರ್ಗದಲ್ಲಿ ನಡೆದರೆ ಭಗವಂತನ ಅರಿವು ಉಂಟಾಗುತ್ತದೆ. ಜಗತ್ತಿನಲ್ಲಿ ದೇವರ ಸಾಕ್ಷಾತ್ಕಾರವಾದ ಸಾಧುಸಂತರ ಅನುಭವ ಹಾಗೂ ಶ್ರೀರಾಮದಾಸರಿಗೆ ಬೇರೆ ಬೇರೆ ಹಂತದಲ್ಲಿ ಆದ ಅನುಭವಗಳು ವಿಭಿನ್ನವಾಗಿರದೆ ಹತ್ತಿರವಾಗಿವೆ.

ಆ ಪವಿತ್ರ ಹಾದಿಯ ಮೊದಲ ಮೆಟ್ಟಿಲು ಭಕ್ತಿ. ಭಕ್ತಿ ಎಂದರೆ ಶಾಶ್ವತ ಶಾಂತಿ ಮತ್ತು ಸ್ವಾತಂತ್ರ್ಯದ ಅರಿವು. ತನ್ನ ಗುರಿ ತಲುಪುವವರೆಗೆ ಅವನಲ್ಲಿ ಒಂದು ಅತೃಪ್ತಿಯ ತುಡಿತ ಇರಬೇಕು. ಆದರೆ ಹೃದಯವನ್ನು ಎಚ್ಚರಗೊಳಿಸುವುದು ಹೇಗೆ? ಯಾವ ಶಕ್ತಿ ಅವನನ್ನು ಬುಡಸಹಿತ ಅಲ್ಲಾಡಿಸಿ ಚಿರಂತನದ ಹಂಬಲವನ್ನು ಉಂಟುಮಾಡುವುದು? ಇದಕ್ಕುತ್ತರವೇನೆಂದರೆ ಶ್ರೇಷ್ಠ ಸಂತರ ಸಂಗ. ಇಂತಹ ಸಂತರ ಒಂದು ನೋಟ ಮತ್ತು ಸ್ಪರ್ಶ ಭಕ್ತನ ಮೇಲೆ ಮೋಡಿ ಉಂಟು ಮಾಡುತ್ತದೆ. ಒಂದು ಪಕ್ಷಿ ತನ್ನ ಬಂಧನದ ಅರಿವಿಲ್ಲದವರೆಗೆ ಆರಾಮವಾಗಿ ಇರುತ್ತದೆ; ಆದರೆ ತಾನು ಬಂಧಿ ಎಂಬ ಅರಿವುಂಟಾದ ಮೇಲೆ ಸ್ವಾತಂತ್ರ್ಯಕ್ಕೆ ಹೋರಾಡುತ್ತದೆ; ಇದೇ ರೀತಿ ಜಾಗೃತ ಮನುಷ್ಯನ ಆತ್ಮ ಅವನೊಳಗೆ ನಡುಗಿ, ತತ್ತರಿಸಿ ಅಶಾಂತವಾಗಿ ಬೇರೆ ದಾರಿಯಿಲ್ಲದೆ ಆತ್ಮ ಬಂಧಮುಕ್ತವಾಗುವ ಶಿಸ್ತಿನ ಹಾದಿಗೆ ಎಳೆಯಲ್ಪಡುತ್ತದೆ. ಆತ್ಮದ ಈ ಹಸಿವು ದಿನೇ ದಿನೇ ಬೆಳೆಯುತ್ತಲೇ ಹೋಗಿ ಮನುಷ್ಯನನ್ನು ಅವನ ಎರಡನೆಯ ಮೆಟ್ಟಿಲು ಅಂದರೆ ವೈರಾಗ್ಯಕ್ಕೆ ಸಿದ್ಧಗೊಳಿಸುತ್ತದೆ.

ಜೀವನದ ಹೊರ ವಸ್ತುಗಳಿಂದ ಮತ್ತು ಮೋಹದಿಂದ ಮನಸ್ಸನ್ನು ಹಿಂದೆಗೆಯುವುದೇ ವೈರಾಗ್ಯ. ಅವನ ಬಂಧನ ಮತ್ತು ಅಜ್ಞಾನ, ಇವೆಲ್ಲ ಅವನ ಹತ್ತಿರದವರ ಮೇಲಿನ ಅತಿಯಾದ ಪ್ರೀತಿಯಿಂದ ಉಂಟಾದದ್ದು ಮತ್ತು ಅದು ಅಸಂಭವ ಕಲ್ಪನೆ ಹಾಗೂ ಭ್ರಾಂತಿ ಎಂದು ಅವನಿಗೆ ಅರ್ಥವಾಗಿದೆ. ಇಷ್ಟು ದಿನ ಅವನ ಯೋಚನೆ, ಭಯ ಇವೆಲ್ಲ ತನಗೆ ಬೇಕಾದ ವಸ್ತುಗಳು ಹಾಗೂ ಜನಗಳಿಗೆ ಸಂಬಂಧಪಟ್ಟಿದ್ದಾಗಿದ್ದು, ಅದನ್ನು ಪಡೆಯಲು ಈಗ ಮನಸ್ಸು ಹಿಂಜರಿಯುತ್ತದೆ. ಈ ವಸ್ತುಗಳು, ತನಗೆ ಬೇಕಾದವರಿಂದ ಪಡೆದ ಸಂತೋಷ ಎಲ್ಲ ಒಂದು ಭ್ರಾಂತಿ ಅಷ್ಟೇ ಎಂಬ ಅರಿವುಂಟಾಗಿದೆ ಅವನಿಗೆ. ಈಗ ಅವನು ಚಿರಶಾಂತಿ ಹಾಗೂ

ಶಾಶ್ವತ ಆನಂದದ ಹಂಬಲದಲ್ಲಿದ್ದಾನೆ. ಪ್ರಾಪಂಚಿಕ ನಿರ್ವಿಕಾರ ಭಾವ ಅವನನ್ನು ಆವರಿಸುತ್ತದೆ. ಈ ಹಂತದಲ್ಲಿ ಅವನು ಮನಸ್ಸನ್ನು ನಿಗ್ರಹಿಸಲು ದೃಢ ಸಂಕಲ್ಪ ಮಾಡುತ್ತಾನೆ– ಇದು ಅವನನ್ನು ಮೂರನೆಯ ಮೆಟ್ಟಿಲಾದ ಏಕಾಗ್ರತೆಗೆ ಕೊಂಡೊಯ್ಯುತ್ತದೆ.

ಅಲೆಯಿಲ್ಲದ ನಿಶ್ಚಿತ ಮನಸ್ಸಿನ ಸ್ಥಿತಿಯೇ ಏಕಾಗ್ರತೆ. ತನ್ನ ಪ್ರಕೃತಿ, ಸ್ಥಿತಿ ಮತ್ತು ಪರಿಸರಕ್ಕೆ ಅನುಗುಣವಾಗಿ ಏಕಾಗ್ರತೆಗೋಸ್ಕರ ಮಾನಸಿಕ ಅಭ್ಯಾಸ ಮಾಡಿಕೊಳ್ಳುತ್ತಾನೆ. ಎಲ್ಲ ಇತರ ವಿಚಾರಗಳನ್ನೂ ಹೊರತುಪಡಿಸಿ ಮನಸ್ಸನ್ನು ಒಂದು ವಿಚಾರದಲ್ಲಿ ಕೇಂದ್ರೀಕರಿಸಲು ಶ್ರಮಿಸಿದಾಗ ಉಂಟಾಗುವುದೇ ಏಕಾಗ್ರತೆ. ಈ ವಿಚಾರ ಹೃದಯದಲ್ಲಿರುವ ಚಿರಂತನ ವಾಸ್ತವಿಕತೆಯನ್ನು ಸೂಚಿಸುವ ಚಿಹ್ನೆಯಾಗಬೇಕು. ಈ ಪ್ರಪಂಚ ಐದು ವಸ್ತುವಿನಿಂದ ಮೂಡಿದೆ. ಭೂಮಿ, ಜಲ, ಅಗ್ನಿ, ವಾಯು ಮತ್ತು ಆಕಾಶದ್ರವ್ಯ– ಇದು ದಿವ್ಯ ವಾಸ್ತವಿಕತೆಯ ಹಂಚಿಕೆ; ಆದ್ದರಿಂದ ಯಾವುದಾದರೂ ಒಂದು ವಸ್ತುವು ಅಂತಿಮ ವಾಸ್ತವಿಕತೆ ಎಂಬ ಅರಿವು ಮನಸ್ಸಿಗೆ ಬಂದಾಗ ಅದು ಪರತತ್ವ ಸತ್ಯವಾಗುತ್ತದೆ. ಆದ್ದರಿಂದ ಮನಸ್ಸಿನ ಶುದ್ಧೀಕರಣಕ್ಕೆ ಒಂದು ವಸ್ತು, ನದಿ, ಅಗ್ನಿ, ವಾಯು, ಬೆಳಕು ಅಥವಾ ಶಬ್ದವನ್ನು ಉಪಾಸನೆಗಾಗಿ ನಿರ್ದೇಶಿಸಿದೆ. ಗಾಳಿ, ಬೆಳಕು ಮತ್ತು ಶಬ್ದ– ಈ ಚಿಹ್ನೆಗಳನ್ನೇ ಏಕಾಗ್ರತೆಗೆ ಹೆಚ್ಚಿಗೆ ಬಳಸಲಾಗಿದೆ. ಪ್ರಾಣಾಯಾಮ ಅಥವಾ ಉಸಿರು ನಿಯಂತ್ರಣ ಗಾಳಿಗೆ ಸಂಬಂಧಿಸಿದೆ; ಬೆಳಕು ಸೂರ್ಯ ಚಂದ್ರರ ಆರಾಧನೆಗೆ ಸೂಚಕವಾಗಿದೆ; ಓಂ ಅಥವಾ ಯಾವುದೇ ದಿವ್ಯನಾಮವಾಗಲಿ ಶಬ್ದಕ್ಕೆ ಸಂಕೇತವಾಗಿದೆ; ಮೇಲಿನೆರಡು ಹೆಚ್ಚು ಮುಖ್ಯವಾದದ್ದು. ಏಕೆಂದರೆ ಸಾಧಕನು ಏಕಾಗ್ರತೆಗಾಗಿ ಹೊರವಸ್ತುಗಳ ಮೇಲೆ ಅವಲಂಬಿಸಬೇಕಾಗಿಲ್ಲ. ಆದರೂ ಅವನು ಯಾವುದೇ ದಾರಿಯನ್ನು ಆಯ್ದುಕೊಂಡರೂ, ಅವನು ದೃಢ ಸಂಕಲ್ಪ ಹೊಂದಿದ್ದರೆ ಮತ್ತು ಸತತ ನಿಷ್ಠನಾಗಿದ್ದರೆ ಅವನು ಮುಂದಿನ ಮೆಟ್ಟಿಲಿಗೆ ಏರುತ್ತಾನೆ; ಅದೇ ಧ್ಯಾನ.

**ಧ್ಯಾನ : ವಿಚಾರದ ಒಂದು ಕಟ್ಟುಪಾಡು:**

ದೇವರು ಚಿರಂತನ, ಸರ್ವವ್ಯಾಪಿ, ಶಕ್ತಿಶಾಲಿ, ಎಲ್ಲವನ್ನೂ ಬಲ್ಲವ, ಸ್ಥಿರ, ಸದಾ ಶಾಂತ ಮತ್ತು ಪರಮಸುಖ ಸತ್ಯ ಎಂಬ ಗುಣ ವಿಶೇಷಣಗಳ ಮೇಲೆ ಮನಸ್ಸನ್ನು ನಿಲ್ಲುವಂತೆ ಮಾಡಲಾಗುತ್ತದೆ. ಇವುಗಳ ಸತತ ಧ್ಯಾನ ಪರಮ ಜಾಗೃತಿಯ ಸ್ಥಿತಿಯಲ್ಲಿ ಕೊನೆಗೊಳ್ಳುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಾಧಕನು ಏಕಾಂತತೆ ಅಥವಾ ಲೌಕಿಕ ಪ್ರಪಂಚದಿಂದ ದೂರವಾದ ಪ್ರದೇಶದಲ್ಲಿ ಇರಬಯಸುತ್ತಾನೆ. ಖಾರ, ಹಳಸಿದ ಊಟಕ್ಕಿಂತ ಸಾತ್ವಿಕ ಆಹಾರವನ್ನು ಆಯ್ದುಕೊಳ್ಳುತ್ತಾನೆ. ಇವನಲ್ಲಿ ಕಾಣುವ ಬದಲಾವಣೆಯೆಂದರೆ– ಒರಟುತನದ ಬದಲು ಸೌಮ್ಯತೆ, ದ್ವೇಷದ



ಬದಲು ಪ್ರೀತಿ, ಮೋಹ ಮತ್ತು ಅಹಂಕಾರದ ಬದಲು ಶಾಂತತೆ ಮತ್ತು ಸಮ ದೃಷ್ಟಿ, ನಮ್ರತೆ, ಮಾಧುರ್ಯ ಮತ್ತು ಹರ್ಷ ಇವೆಲ್ಲ ಅವನ ಮಾತುಗಳಲ್ಲಿ ಮತ್ತು ಚಲನವಲನಗಳಲ್ಲಿರುತ್ತವೆ. ಪ್ರಾಪಂಚಿಕ ಸುಖಕ್ಕೆ ಹಾತೊರೆಯುವವರ ಸಂಗವನ್ನು ದೂರ ಮಾಡುತ್ತಾನೆ ಮತ್ತು ದೇವರ ಭಕ್ತರು ಮತ್ತು ಸಾಧುಗಳ ಸಂಗದಲ್ಲಿ ಶಾಂತಿ, ಆನಂದ ಕಂಡುಕೊಳ್ಳುತ್ತಾನೆ.

ಅವನು ದೇವರು, ಅವನಿಗೆ ಸಂಬಂಧಿಸಿದ ಮಹಿಮೆಯ ವಿಷಯವನ್ನೇ ಕುರಿತು ವಿಚಾರ ಮಾಡುತ್ತಾನೆ. ಸರಳತೆ ಮತ್ತು ಮುಗ್ಧತೆ ಅವನಲ್ಲಿ ಮನೆ ಮಾಡಿರುತ್ತವೆ. ಧ್ಯಾನದಿಂದ ಮುಂದಿನ ಮೆಟ್ಟಿಲು ಹೆಚ್ಚಿನ ವೇಗದಲ್ಲಿ ಸಿಗುತ್ತದೆ. ಅದೇ ಸಮಾಧಿ– ಅವನ ದಿವ್ಯ ಮಹಿಮೆಯ ಪರಮ ಪ್ರಾಪ್ತಿ. ದೇವರ ದರ್ಶನದ ಆ ಅನುಭವ ವರ್ಣಿಸಲಸಾಧ್ಯ.

**ಸಮಾಧಿ ಅಥವಾ ದೇವರ ದರ್ಶನ:**

ಈ ಉನ್ನತ ಅನುಭವದ ವರ್ಣನೆ ಮಾಡಲು ಪ್ರಯತ್ನಗಳು ನಡೆಯುತ್ತಲೇ ಇವೆ. ಅವನು ಹೇಳುತ್ತಾನೆ: "ನಾನೊಂದು ಜ್ಞಾನೋದಯವಾದ ಆತ್ಮ, ನಾನೇ ಪರಮಸತ್ಯ ಎಮಬ ದಿವ್ಯಜ್ಞಾನದ ಅರಿವು ಪಡೆದವನು, ನನ್ನ ಸ್ವಂತ ಜೀವನ ಜಗತ್ತಿನ ಮತ್ತು ಚಿರಂತನ ಚೈತನ್ಯದಲ್ಲಿ ಲೀನವಾಗಿದೆ. ಈಗ ನನ್ನ ಗುರಿಯನ್ನು ಮುಟ್ಟಿದ್ದೇನೆ. ನಾನು ಮನುಷ್ಯರೂಪದ ದೇವರಾಗಿದ್ದೇನೆ. ನಾನು ಅನಂತದಲ್ಲಿ ಬದುಕಿದ್ದು ಚಿರಂತನದಲ್ಲಿ ನಡೆಯುತ್ತಿದ್ದೇನೆ. ಹಾದಿಯ ಕೊನೆಯನ್ನು ಮುಟ್ಟಿದ್ದೇನೆ– ದೇವರ ಅರಿವು ಅಂದರೆ ಸತ್–ಚಿತ್–ಆನಂದದ ಅಂತಸ್ತನ್ನು ತಲುಪಿದ್ದೇನೆ!"

ಸೃಷ್ಟಿ, ಸ್ಥಿತಿ, ಲಯ ಇವೆಲ್ಲಕ್ಕೂ ಕಾರಣ ಶ್ರೇಷ್ಠನಾದ ಬ್ರಹ್ಮನ್. ಪರಮ ಶ್ರೇಷ್ಠವಾದ ಆ ತತ್ವವು ಭಾರತ ಮತ್ತು ವಿಶ್ವದ ಇತರ ಭಾಗಗಳಲ್ಲಿ ಬೇರೆ ಬೇರೆ ಯುಗಗಳಲ್ಲಿ ದುಷ್ಟತನವನ್ನು ನಾಶ ಮಾಡಿ ಪ್ರೀತಿ ಮತ್ತು ಧರ್ಮವನ್ನು ಅನುಷ್ಠಾನಗೊಳಿಸಲು ಮೈ ತಳೆದಿದೆ. ರಾಮ, ಕೃಷ್ಣ, ಬುದ್ಧ, ಮಹಾಋಷಿಗಳು, ಮಹಾತ್ಮರು ಮತ್ತು ಸಾಧುಸಂತರು ಮುಂತಾದವರು ತೋರುವ ಒಂದೇ ಗುರಿ– ಜೀವನದ ಪರಮಗುರಿ– ವಿಮೋಚನೆ ಮತ್ತು ದೇವರಲ್ಲಿ ಐಕ್ಯತೆ. ಮನುಷ್ಯ ಜೀವನ ಈ ಸ್ಥಿತಿಗೆ ಹೇಳಿ ಮಾಡಿಸಿದುದಾಗಿದೆ. ಎಲ್ಲ ಜೀವಿಗಳ ಹೃದಯದಲ್ಲೂ ದೇವರು ಆಸೀನನಾಗಿದ್ದಾನೆ. ಅವನೇ ಪರಮಸತ್ಯ, ಜಾಗೃತಿ ಮತ್ತು ಸಂತೋಷ– ಸತ್, ಚಿತ್, ಆನಂದ. ಎಲ್ಲವನ್ನೂ ಅವನಿಗೆ ಒಪ್ಪಿಸಿಬಿಟ್ಟು ಭಕ್ತಿಯಿಂದ ಸೇವಿಸಿದರೆ ಅವನ ಅರಿವುಂಟಾಗುವುದು. ಈ ಗುರಿಯ ಹಾದಿಗೆ ಮೊದಲ ಮೆಟ್ಟಿಲು ಶುದ್ಧತೆ ಮತ್ತು ಮನಸ್ಸಿನ ಮೇಲೆ ಹಿಡಿತ; ಇವು ಏಕಾಗ್ರತೆಯಿಂದ ಸಾಧ್ಯವಾಗುತ್ತವೆ. ದಿವ್ಯನಾಮದ ಪುನರುಚ್ಚರಣೆ ಮತ್ತು ಎಲ್ಲ ಕಾರ್ಯಗಳನ್ನು ಆ ದೇವರಿಗೆ ಸಮರ್ಪಿಸುವುದು

ಏಕಾಗ್ರತೆಗೆ ಒಂದು ಸುಲಭ ವಿಧಾನ. ಯಾವ ಹೆಸರಿನಿಂದಲಾದರೂ ದೇವರನ್ನು ಕರೆಯಬಹುದು. ಹೆಸರೇ ಬ್ರಹ್ಮನ್. ಹೆಸರಿನ ಪುನರುಚ್ಚರಣೆ ಮತ್ತು ಅವನ ಮಹಿಮೆಗಳ ಧ್ಯಾನ ಮನಸ್ಸನ್ನು ಶುದ್ಧಗೊಳಿಸುತ್ತದೆ. ಪ್ರಾರ್ಥನೆ, ಸ್ತೋತ್ರ ಮತ್ತು ಉಪವಾಸಗಳು ಅಗತ್ಯ. ಸಹಾನುಭೂತಿ, ಶಾಂತಿ ಮತ್ತು ಕ್ಷಮೆ ಎಂಬ ದಿವ್ಯ ಗುಣಗಳನ್ನು ಬೆಳೆಸಿಕೊಳ್ಳಬೇಕು. ಇಂತಹ ಘನಸದ್ಗುಣಗಳು ನೆಲೆಸಿರುವ ಹೃದಯದಲ್ಲಿ ದೇವರು ಕಾಣಿಸಿಕೊಳ್ಳುತ್ತಾನೆ. ಈಗ ನಿಮ್ಮೊಳಗೆ ಪ್ರಕಾಶಿಸುವ ದಿವ್ಯ ಬೆಳಕಿನಿಂದ ನಿಮ್ಮ ಅಹಂಕಾರ ಕರಗಿ ದೇವರೊಂದಿಗಿನ ನಿಮ್ಮ ವ್ಯಕ್ತಿತ್ವದ ಅರಿವುಂಟಾಗುತ್ತದೆ. ಈ ಅನುಭವ ನಿಮಗೆ ಅಮರತ್ವದ ಜ್ಞಾನ ನೀಡುತ್ತದೆ. ನಂತರ ನೀವು ದಿವ್ಯ ಜಾಗೃತಿಯಲ್ಲಿ ನೆಲೆಸುತ್ತೀರಿ ಮತ್ತು ನಿಮ್ಮ ದೃಷ್ಟಿ ವಿಶ್ವವ್ಯಾಪಿಯಾಗಿ ನಿಮಗೆ ಪರಮ ಶಾಂತಿ ಮತ್ತು ಪರವಶತೆ ನೀಡುತ್ತದೆ. ಈಗ ನೀವು ನಿಮ್ಮಲ್ಲಿ ಕಂಡುಕೊಂಡಿರುವ ದೇವರ ಅಭಿವ್ಯಕ್ತಿಯಾದ ವಿಶ್ವವನ್ನು ಕಾಣುವಿರಿ. ಈಗ ನಿಮಗೆ ದೇವರು ಎಲ್ಲೆಡೆಯೂ ಇದ್ದಾನೆ. ಹಾಗೂ ಎಲ್ಲರಲ್ಲೂ ಮತ್ತು ಎಲ್ಲದರಲ್ಲಿಯೂ ಇದ್ದಾನೆ ಎಂಬ ಅರಿವು ಉಂಟಾಗುತ್ತದೆ. ಈ ಅಲೌಕಿಕ ದೃಷ್ಟಿ ನಿಮ್ಮ ಹೃದಯದಲ್ಲಿ ಪ್ರೀತಿಯ ಕಾರಂಜಿಯನ್ನು ತೆರೆಯುತ್ತದೆ– ಇಡೀ ಜಗತ್ತನ್ನೇ ತುಂಬಿ ತಬ್ಬಿಕೊಳ್ಳುವ ಪ್ರೀತಿ– ಈ ದೃಷ್ಟಿಯ ಸಮತೆಯಲ್ಲಿ ಎಲ್ಲಾ ಭಿನ್ನತೆಗಳೂ ಮಾಯವಾಗುತ್ತವೆ. ಈ ದಿವ್ಯಾನಂದದ ಸ್ಥಿತಿ ನಿಮಗೆ ವಿಮೋಚನೆ ಮತ್ತು ಶಾಶ್ವತ ಆನಂದ ನೀಡುತ್ತದೆ.

ದೇವರ ಅವತಾರಗಳು ಅಥವಾ ದೈವಿಕ ಗುರುಗಳಾದ ಏಸುಕ್ರಿಸ್ತ, ಜಾರತೂಷ್ಟ್ರ ಮುಂತಾದವರು ಇದೇ ಶ್ರೇಷ್ಠ ಸತ್ಯದ ಪ್ರಕಟರೂಪಗಳು. ಎಲ್ಲ ಧರ್ಮಗಳೂ ಮಾನವಕೋಟಿಯನ್ನು ಒಂದೇ ದೇವರತ್ತ ಕೊಂಡೊಯ್ಯುವ ವಿವಿಧ ಮಾರ್ಗಗಳು ಮಾತ್ರ.

ಓಂ ಶ್ರೀ ರಾಮ್ ಜಯ ರಾಮ್ ಜಯ ಜಯ ರಾಮ್।

* * * *



## ೧೮. ಗೀತೆಯ ಸಂದೇಶ

ಇಡೀ ಭಗವದ್ಗೀತೆಯ ಸಾರಾಂಶವನ್ನೀಗ ನಮ್ಮ ಓದುಗರಿಗೆ ನೀಡಲಾಗುವುದು. ಮೊದಲಿಗೆ ಪರಮಾತ್ಮನು ಅಜ್ಞಾನದಿಂದ ಕೂಡಿದ ಆತ್ಮನನ್ನು, ದುಷ್ಟತ್ವದ ಇರವನ್ನು ಹಾಗೂ ಅದು ಉಂಟುಮಾಡುವ ಬಂಧನದಂತಹ ವ್ಯಾಮೋಹದ ಬಗ್ಗೆ ಎಚ್ಚರಿಸುವುದಲ್ಲದೆ, ದಿವ್ಯವೂ ಅಮರವೂ ಆದ ತನ್ನ ನಿಜ ಸ್ವರೂಪವನ್ನು ಅರಿಯಲಾಗದ ಏಕಾಂತತೆಯಿಂದ ಹೊರ ಬರುವುದರ ಬಗ್ಗೆ ತಿಳಿಸುವುದು. ಈ ಮೋಹವೆಂಬ ದುಷ್ಟತ್ವವು ಹುಟ್ಟುವುದು ಆಸೆಯಿಂದಲೇ. ಅದು ಅಜ್ಞಾನದ ಮೂಲ ಕಾರಣವೂ ಹೌದು. ಈ ಮೋಹ ಹಾಗೂ ಆಸೆಗಳಿಂದ ವಿಮುಕ್ತನಾಗುವುದೆಂದರೆ ಬಂಧಮುಕ್ತ ಅಥವಾ ಮುಕ್ತನಾಗುವುದು. ಅಮರವೆನಿಸಿದ ಆತ್ಮನು ಹಾಗೂ ಆತ್ಮನ ಗುರುತಿಸುವಿಕೆಯೇ ಮುಕ್ತನೆನಿಸಿದಂತೆ. ಸಾವು ಇರದ ಈ ಸ್ಥಿತಿಯ ಅರಿವು ಮನುಷ್ಯನ ಮನಸ್ಸು, ಮುಕ್ತನಾಗುವ ಅದಮ್ಯ ಆಕಾಂಕ್ಷೆಯಿಂದ ಕೂಡಿ, ಕ್ಷಯವಾಗುವ ಶರೀರದಿಂದಲೂ ಇಂದ್ರಿಯಗಳಿಂದಲೂ ಕೂಡಿದ ಜೀವದಿಂದ ಆತ್ಮನು ಬೇರಾಗುವ ಮೂಲಕ ನಿತ್ಯಸತ್ಯದ, ತನ್ನರಿವಿನ ಬಗ್ಗೆ ಚಿಂತಿಸಲು ಮಾರ್ಗದರ್ಶನ ನೀಡಲ್ಪಡುವುದು. ಜೀವಿಯೂ ಅನೇಕ ಬಗೆಯ 'ಸಾಧನ' ಅಥವಾ ಆಧ್ಯಾತ್ಮ ಪ್ರಕ್ರಿಯೆಗಳ ಮೂಲಕವೇ ತನ್ನಲ್ಲಿಯೇ ಆತ್ಮನು ನೆಲೆನಿಂತಿರುವ ಸತ್ಯವನ್ನು ದರ್ಶಿಸಲು ಸಾಧ್ಯ. ಅಮರವೂ ಅನಂತವೂ ಆದ ಆತ್ಮನ ಬಗ್ಗೆ ಮರೆವುಂಟಾಗುವುದೇ ಅಜ್ಞಾನದಿಂದ. ಆದುದರಿಂದ ಎಲ್ಲ 'ಸಾಧನ'ಗಳೂ ಪರಮಸತ್ಯವಾದ ಆತ್ಮನ ಅರಿವಿನಲ್ಲಿನ ಮರೆವಿನ ಕಾರಣ ಅಜ್ಞಾನದಿಂದಾಗಿಯೇ ಎಂಬ ಅಚಿಂತ್ಯ ನೆನಪನ್ನು ತಿಳಿಸಿಕೊಡುವುವು. ಈ ನೆನಪು ಕಾರಣದಿಂದಾಗಿಯೇ ಆತ್ಮನು ದಿವ್ಯಜ್ಞಾನ ಹೊಂದಲು ಸಾಧ್ಯವಾಗಿ ಅದರಿಂದ ತಾನು ಪರಮಸತ್ಯ ಹಾಗೂ ಮೋಕ್ಷ ಹೊಂದಲು ಸಾಧ್ಯವಾಗುವುದು. ಈ ಸ್ಥಿತಿ ಹೊಂದಿದ ಆತ್ಮನು ಶಾರೀರಿಕವಾಗಿದ್ದುದಕ್ಕಿಂತ ತಾನು ಉನ್ನತ ಸ್ತರದಲ್ಲಿರುವುದನ್ನು ತಿಳಿಯಲ್ಪಟ್ಟು ಹಿಂದೆ ಪ್ರಕೃತಿ ಗುಣಗಳಿಂದ ಹಾಗೂ ತನ್ನಲ್ಲಿ ಹುಟ್ಟುತ್ತಿದ್ದ ದ್ವಂದ್ವಗಳಿಂದ ಎತ್ತರಕ್ಕೇರಿ ಅಮರತ್ವದ ಆನಂದವನ್ನು ಹೊಂದುವನು. ಆತ್ಮಸಾಕ್ಷಾತ್ಕಾರವಾಗಿ ಬಂಧಮುಕ್ತವಾದ ಆತ್ಮವು ದೇವನೇ ಎಂಬುದು ಒಂದು ತಿಳಿವಳಿಕೆಯಾದರೂ ಅದು ಪರಮಾತ್ಮನನ್ನು ಪೂರ್ಣವಾಗಿ ಅರಿಯಲು ಹಾಗೂ ತಾನು ಅವನಲ್ಲಿ ಐಕ್ಯವಾಗುವುದಕ್ಕಾಗಿ ಯತ್ನಿಸುವುದು. ಇಲ್ಲಿ ಸ್ವ–ಅರ್ಪಣಾ ಮನೋಭಾವದ ಹಾದಿಯು

ಆತ್ಮನಿಗೆ ದಿವ್ಯಜ್ಞಾನದಿಂದ ಎಚ್ಚರಗೊಳಿಸುವ ಪ್ರಕ್ರಿಯೆ ವರ್ಣನಾತೀತವಾದುದು. ಅದೀಗ ತನ್ನಲ್ಲಿ ಸಕಲ ಚರಾಚರ ವಸ್ತು, ಜೀವಿಗಳನ್ನು ಹೊಂದಿದಂತೆ, ಪರಮ ಸತ್ಯವೂ, ಊಹಿಸದಳವೂ, ವರ್ಣಿಸಲ ಸಾಧ್ಯದ, ನಿತ್ಯವೂ, ಅನಂತವೂ ಆದುದರ ಅರಿವು ಹಾಗೂ ಅಭಿವ್ಯಕ್ತಿ ಸಾಧ್ಯವೆನಿಸುವುದು. ಅವನು ತನ್ನ ನಿಜಸ್ಥಿತಿಯನ್ನು ತಾನು ದೇವರಲ್ಲಿ ಒಂದಾದ ಅನುಭವವನ್ನು ಪಡೆಯುವುದು ಹಾಗೂ ಅಮರತ್ವದ ಪರಮಾನಂದವನ್ನು ಹೊಂದಿ ಜಗತ್ತಿನ ನಿತ್ಯ ಕ್ರಿಯೆಗಳನ್ನೆಲ್ಲ ಅರಿಯಲು ಅದರಲ್ಲಿ ತಾನೂ ಇರುವ ಅರಿವು ಗಳಿಸಲು ಈಗಲೀಗ ಸಾಧ್ಯ. ಗೀತೆಯ ಸಾರಾಂಶವೆಂದರೆ ಪರಮಾತ್ಮನನ್ನು ಅರಿತುಕೊಳ್ಳುವುದು ಭಕ್ತನಿಂದ ಸಾಧ್ಯ ಹಾಗೂ ದಿವ್ಯವಾದ ಪ್ರೇಮದಿಂದ ಅವನು ಕೂಡಿರುವ ಸತ್ಯದ ಅರಿವೂ ಆಗುವುದು. ಆಗ ಅವನು ಭಕ್ತನು ಮನುಷ್ಯ ರೂಪದ ದೇವನೇ ಆಗಿರುವನು. ಭಗವಂತನು ಭಕ್ತನ ಹೃದಯದಲ್ಲಿ ತಾನು ನೆಲೆಸಿರುವ ಸತ್ಯವನ್ನು ಪ್ರಕಟ ಮಾಡುವನು ಹಾಗೂ ಅವನಲ್ಲೇ ಕೂಡಿರುವಂತೆ ಭಕ್ತನಿಗೆ ಜ್ಞಾನೋದಯ ಉಂಟುಮಾಡುವನು. ಇದೇ ಗೀತೆಯ ಸಂದೇಶವೂ ಅದರ ಗುರಿಯೂ ಆಗಿರುವುದು.

ಓಂ ಶ್ರೀ ರಾಮ್ ಜಯ ರಾಮ್ ಜಯ ಜಯ ರಾಮ್।

* * * *